# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜನವರಿ 05, 2022

ಸಂಪುಟ : 48 ಸಂಚಿಕೆ : 235 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ಸುರೇಶ್-ರವಿಕುಮಾರ್ ವರ್ತನೆಗೆ ಖಂಡನೆ

### ಜಿಲ್ಲಾ ಬಿಜೆಪಿಯಿಂದ ಡಿ.ಕೆ. ಸುರೇಶ್ ಪ್ರತಿಕೃತಿ ದಹಿಸಿ ಪ್ರತಿಭಟನೆ

ದಾವಣಗೆರೆ, ಜ.4- ರಾಮನಗರದಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ನಾಡ ಪ್ರಭು ಕೆಂಪೇಗೌಡರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸಂಸದ ಡಿ. ಕೆ.ಸುರೇಶ್ ಹಾಗೂ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಅವರ ವರ್ತನೆ ಖಂಡಿಸಿ, ಜಿಲ್ಲಾ ಬಿಜೆಪಿಯಿಂದ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆ ಮುಖೇನ ಡಾ. ಬಿ.ಆರ್. ಅಂಬೇಡ್ಕರ್ ವೃತ್ತಕ್ಕೆ ಆಗಮಿಸಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಬಹಿರಂಗ ಸಭೆ ನಡೆಸಿ, ಸಂಸದ ಡಿ.ಕೆ. ಸುರೇಶ್ ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಬಿಜೆಪಿ ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ಅಂಬೇಡ್ಕರ್ ಮತ್ತು ಕೆಂಪೇಗೌಡರ ಪ್ರತಿಮೆ ಅನಾವರಣ ಮತ್ತು ವಿವಿಧ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಮತ್ತು ವಿಪ ಸದಸ್ಯ ರವಿಕುಮಾರ್ ನಡೆದುಕೊಂಡ ರೀತಿ ಅತ್ಯಂತ ಖಂಡನೀಯವಾಗಿದ್ದು, ಡಿ.ಕೆ.ಸಹೋದರರು ರಾಮನಗರದಲ್ಲಿ ಹಣ-ತೋಳ್ಬಲದಿಂದ ರಾಜಕಾರಣ ಮಾಡುತ್ತಿರುವುದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ಇದು ಕಾಂಗ್ರೆಸ್ ಸಂಸ್ಕೃತಿಯನ್ನು ತೋರಿಸುತ್ತಿದೆ ಎಂದು ಟೀಕಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯ ಶ ವ ಂ ತ ರಾ ವ್ (2ನೇ ಪುಟಕ್ಕೆ)

## ವಾರಾಂತ್ಯ ಕರ್ಫ್ಯೂ, ಶೇ.50ರ ಮಿತಿ

**ಮದುವೆ - ಸಮಾರಂಭಗಳ ಮೇಲೆ ನಿರ್ಬಂಧ**

**ಕೊರೊನಾ ತಡೆಗಾಗಿ ಎರಡು ವಾರಗಳ ನಿರ್ಬಂಧಗಳ ಹೇರಿಕೆ**

**ರಾತ್ರಿ ಕರ್ಫ್ಯೂ ಮುಂದುವರಿಕೆ, ಜಾತ್ರೆ - ಪ್ರತಿಭಟನೆಗಳಿಗೆ ಅವಕಾಶ ಇಲ್ಲ**

**ಚಿತ್ರಮಂದಿರ, ಬಾರ್ - ಪಬ್‌ಗಳ ಸಾಮರ್ಥ್ಯದ ಶೇ.50ರಷ್ಟು ಜನರಿಗೆ ಅವಕಾಶ**

ಬೆಂಗಳೂರು, ಜ. 5 – ಎರಡು ವಾರಗಳ ಕಾಲ ವಾರಾಂತ್ಯದ ಕರ್ಫ್ಯೂ ಹೇರಲು, ಸರ್ಕಾರಿ ಕಚೇರಿ ಹಾಗೂ ಸಾರ್ವಜನಿಕ ಕೇಂದ್ರಗಳಲ್ಲಿ ಶೇ.50ರಷ್ಟು ಜನರಿಗೆ ಮಾತ್ರ ಅವಕಾಶ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ನಾಳೆ ಬುಧವಾರ ರಾತ್ರಿ 10 ಗಂಟೆಯಿಂದ ಹೊಸ ನಿಯಮಗಳು ಜಾರಿಗೆ ಬರಲಿವೆ.

ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಗಣನೀಯವಾಗಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಬೆಂಗಳೂರಿನಲ್ಲಿ ಹತ್ತನೇ ತರಗತಿ ಹಾಗೂ 12ನೇ ತರಗತಿ, ವೈದ್ಯಕೀಯ, ನರ್ಸಿಂಗ್, ಪ್ಯಾರಾ ಮೆಡಿಕಲ್ ಹೊರತು ಪಡಿಸಿ ಉಳಿದ ಎಲ್ಲಾ ಶಾಲಾ - ಕಾಲೇಜು ತರಗತಿಗಳನ್ನು ಆನ್‌ಲೈನ್ ಮೂಲಕ ನಡೆಸಲು ನಿರ್ಧರಿಸಲಾಗಿದೆ. ಆದರೆ, ರಾಜ್ಯದ ಉಳಿದೆಡೆ ಶಾಲಾ - ಕಾಲೇಜುಗಳು ಎಂದಿನಂತೆ ನಡೆಯಲಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಮೂರೂವರೆ ಗಂಟೆಗಳ ಕಾಲ ನಡೆದ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ವಿವರ ನೀಡಿರುವ ಸಚಿವ ಆರ್. ಅಶೋಕ್, ರಾತ್ರಿ ಕರ್ಫ್ಯೂ ಇನ್ನೆರಡು ವಾರಗಳ ಕಾಲ ಮುಂದುವರೆಯಲಿದೆ ಎಂದು ಹೇಳಿದ್ದಾರೆ.


ಶುಕ್ರವಾರ ರಾತ್ರಿ 10 ರಿಂದ ಸೋಮವಾರ ಬೆಳಿಗ್ಗೆ 5 ರವರೆಗೆ ವಾರಾಂತ್ಯದ ಕರ್ಫ್ಯೂ ಇರಲಿದೆ. ಈ ಅವಧಿಯಲ್ಲಿ ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ ಇರಲಿದೆ ಎಂದು ಅಶೋಕ ಹಳಿದ್ದಾರೆ.

ಚಿತ್ರಮಂದಿರ, ಮಾಲ್, ಪಬ್, ಬಾರ್, ಕ್ಲಬ್ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಶೇ.50ರಷ್ಟು ಸಾಮರ್ಥ್ಯಕ್ಕೆ ಅವಕಾಶ ಇರಲಿದೆ. ಮದುವೆ ಹೊರಾಂಗಣದಲ್ಲಿದ್ದರೆ 200 ಜನ ಹಾಗೂ ಒಳಾಂಗಣದಲ್ಲಿ 100 ಜನರಿಗೆ ಮಾತ್ರ ಅವಕಾಶ ಇರಲಿದೆ. ಆರಾಧನಾ ಸ್ಥಳಗಳಿಗೆ 50 ಜನ ಮಾತ್ರ ಬರಬಹುದು. ಈ ಸ್ಥಳಗಳಿಗೆ ಭೇಟಿ ನೀಡುವವರು ಎರಡು ಡೋಸ್ ಲಸಿಕೆ ಪಡೆದಿರಬೇಕು ಎಂದವರು ತಿಳಿಸಿದ್ದಾರೆ.

ಸಭೆ - ಸಮಾರಂಭಗಳ ಮೇಲೂ ಕಡಿವಾಣ ಹಾಕಲಾಗಿದೆ. ಯಾವುದೇ ಸಮಾರಂಭದಲ್ಲಿ 50 ಜನರು ಮಾತ್ರ ಭಾಗವಹಿಸಲು ಅವಕಾಶವಿದೆ. ಜಾತ್ರೆಗಳಂತಹ ಯಾವುದೇ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಹೋರಾಟದ ಕಾರ್ಯಕ್ರಮಗಳ ಮೇಲೆ ನಿಷೇಧ ಹೇರಲಾಗಿದೆ.

ಹೊರ ರಾಜ್ಯಗಳಿಂದ ಬರುವವರಿಗೆ ಆರ್.ಟಿ.ಪಿ.ಸಿ.ಆರ್. ನೆಗೆಟಿವ್ ಪ್ರಮಾಣ ಪತ್ರ ಕಡ್ಡಾಯವಾಗಿದೆ. ವಿದೇಶದಿಂದ ಬರುವವರಿಗೆ ಸಾಂಸ್ಥಿಕ ಕ್ವಾರಂಟೈನ್ ಕಡ್ಡಾಯವಾಗಿದೆ. ಬಜೆಟ್ ಹೋಟೆಲ್ ಹೊರತು ಪಡಿಸಿ ಉಳಿದ ಹೋಟೆಲ್‌ಗಳಲ್ಲಿ ಕ್ವಾರಂಟೈನ್ ಇರುವವರು ತಾವೇ ವೆಚ್ಚ ಭರಿಸಬೇಕು ಎಂದವರು ಹೇಳಿದ್ದಾರೆ. ಕಳೆದ ಎರಡು ಅಲೆಗಳಲ್ಲಿ ಬೆಂಗಳೂರಿನಲ್ಲೇ ಶೇ.70-80 ರಷ್ಟು ಪ್ರಕರಣಗಳು ಕಂಡು (2ನೇ ಪುಟಕ್ಕೆ)

### ಪರಿಸ್ಥಿತಿ ಭೀಕರ ಇಲ್ಲ



ಪ್ರಸಕ್ತ ಪರಿಸ್ಥಿತಿ ಭೀಕರ ಇಲ್ಲ. ಮೊದಲ ಎರಡು ಅಲೆಗಳಿಗೆ ಹೋಲಿಸಿದರೆ ವೆಂಟಿಲೇಟರ್ ಹಾಗೂ ಆಕ್ಸಿಜನ್ ಅಗತ್ಯ ಕಡಿಮೆ ಇದೆ. ಆದರೆ, ಅತಿ ಹೆಚ್ಚು ಜನರು ಸೋಂಕಿತರಾದರೆ ಆಸ್ಪತ್ರೆಗಳ ಮೇಲೆ ಒತ್ತಡ ಬೀರುತ್ತದೆ. ಹೀಗಾಗಿ ಪರಿಸ್ಥಿತಿ ಕೈ ಮೀರಿ ಹೋಗುವುದನ್ನು ತಡೆಯಲು ಮುಂದಾಲೋಚನಾ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆರೋಗ್ಯ ಸಚಿವ ಡಾ. ಸುಧಾಕರ್ ಹೇಳಿದ್ದಾರೆ. ಜನರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಗುಂಪು ಸೇರಬಾರದು. ಮುಂದಿನ ನಾಲ್ಕಾರು ವಾರಗಳ ಕಾಲ ಕೊರೊನಾ ಮಾರ್ಗಸೂಚಿ ಪಾಲಿಸುವುದು ಮುಖ್ಯವಾಗಿದೆ ಎಂದವರು ಹೇಳಿದ್ದಾರೆ.

## ಮೂರನೇ ಅಲೆ ಆರಂಭದ ಸೂಚನೆ

### ಶೇ.50ರಷ್ಟು ಕೊರೊನಾ ಪ್ರಕರಣಗಳಲ್ಲಿ ಓಮಿಕ್ರಾನ್

ನವದೆಹಲಿ, ಜ. 4 - ಪ್ರಮುಖ ನಗರಗಳಲ್ಲಿ ಕಂಡು ಬರುತ್ತಿರುವ ಕೊರೊನಾ ಪ್ರಕರಣಗಳಲ್ಲಿ ಓಮಿಕ್ರಾನ್ ರೂಪಾಂತರಿ ಪಾಲು ಶೇ.50ಕ್ಕೂ ಹೆಚ್ಚಾಗಿದೆ. ಇದು ಮೂರನೇ ಅಲೆಯನ್ನು ಸೂಚಿಸುತ್ತಿದೆ ಎಂದು ಕೋವಿಡ್ ಕಾರ್ಯಪಡೆ ಸಮಿತಿಯಾದ ಎನ್‌ಟಿಎಜಿಐ ಅಧ್ಯಕ್ಷ ಡಾ. ಎನ್.ಕೆ. ಅರೋರ ಹೇಳಿದ್ದಾರೆ.


ಬಹುತೇಕ ರಾಜ್ಯಗಳಲ್ಲಿ ಓಮಿಕ್ರಾನ್ ಪತ್ತೆಯಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಕಂಡು ಬಂದ ಓಮಿಕ್ರಾನ್ ಅಲೆಗೂ, ಭಾರತದಲ್ಲಿ ಕಂಡು ಬರುತ್ತಿರುವ ಅಲೆಗೂ ಹೋಲಿಕೆ ಇದೆ ಎಂದವರು ಹೇಳಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಎರಡು ವಾರಗಳಲ್ಲಿ ಕೊರೊನಾ ತೀವ್ರ ಹೆಚ್ಚಾಗಿತ್ತು. ಆದರೆ, ಬಹುತೇಕ ಪ್ರಕರಣಗಳು ಲಕ್ಷಣ ರಹಿತ ಇಲ್ಲವೇ ಸೌಮ್ಯ ಸೋಂಕಿನದ್ದಾಗಿತ್ತು ಎಂದು ಅರೋರ ಹೇಳಿದ್ದಾರೆ.

ಭಾರತ ಹಾಗೂ ದಕ್ಷಿಣ ಆಫ್ರಿಕಾ ಎರಡರಲ್ಲೂ ನೈಸರ್ಗಿಕ ಸೋಂಕು ದರ ಹೆಚ್ಚಾಗಿತ್ತು. ಆದರೆ, ಭಾರತದಲ್ಲಿ ರೋಗ ನಿರೋಧಕತೆ ಹಲವು ಪಟ್ಟು ಹೆಚ್ಚಾಗಿದೆ. ಭಾರತದ ಮೂರನೇ (4ನೇ ಪುಟಕ್ಕೆ)

## 50 ಕ್ವಿಂ. ರಾಗಿ ಖರೀದಿಗೆ ಆಗ್ರಹ

### ಜಗಳೂರಿನಲ್ಲಿ ರೈತ ಸಂಘ-ಹಸಿರು ಸೇನೆಯಿಂದ ಪ್ರತಿಭಟನೆ



ಜಗಳೂರು, ಡಿ.4- ಸರ್ಕಾರದಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಋತುವಿನ ರಾಗಿಯನ್ನು ಪ್ರತಿ ರೈತರಿಗೆ 20 ಕ್ವಿಂಟಾಲ್ ಬದಲಿಗೆ 50 ಕ್ವಿಂಟಾಲ್ ವರೆಗೆ ಖರೀದಿಸಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಆಡಳಿತ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಹಶೀ ಲ್ದಾರ್ ಕಛೇರಿಗೆ ಆಗಮಿಸಿ ಮನವಿ ಸಲ್ಲಿಸಿದರು.

ಪ್ರಧಾನ ಕಾರ್ಯದರ್ಶಿ ಚಿರಂಜೀವಿ ಮಾತನಾಡಿ, ಕಳೆದ ಸಾಲಿನಲ್ಲಿ ರಾಗಿ ಖರೀದಿ ಕೇಂದ್ರದಲ್ಲಿ 50 ಕ್ವಿಂಟಾಲ್ ವರೆಗೆ ಖರೀದಿ ಮಾಡುತ್ತಿದ್ದರು. ಪ್ರಸಕ್ತ ಸಾಲಿನಲ್ಲಿ ಕೇವಲ 20 ಕ್ವಿಂಟಾಲ್ ಮಾತ್ರ ಖರೀದಿಗೆ ಸರ್ಕಾರ ನಿಗದಿ ಮಾಡಿದ್ದು, ಸಾಗಾಣಿಕೆ ವೆಚ್ಚ ಸೇರಿದಂತೆ ರೈತರಿಗೆ ಅನಾನುಕೂಲವಾಗಿದೆ. ಕೂಡಲೇ 50 ಕ್ವಿಂಟಾಲ್ ನಿಗದಿಗೊಳಿಸಿ ಕ್ವಿಂಟಾಲ್‌ಗೆ 500 ರೂ. ಪ್ರೋತ್ಸಾಹ ಧನ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಪಧಾದಿಕಾರಿಗಳಾದ ಗಂಗಾಧರಪ್ಪ, ಸತೀಶ್, ರಾಜು, ಕೆಂಚಪ್ಪ, ಪ್ರಹ್ಲಾದಪ್ಪ, ಏಕಾಂತಪ್ಪ, ಗುರುಮೂರ್ತಿ, ರಮೇಶ್, ಪರಶರಾಮಪ್ಪ, ಚಂದ್ರಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆಗೆ ಒತ್ತಾಯ




**ಹರಿಹರ**

ಹರಿಹರ, ಜ. 4 - ಅತಿಥಿ ಉಪನ್ಯಾಸಕರ ನ್ಯಾಯ ಯುತ ಬೇಡಿಕೆಗಳನ್ನು ರಾಜ್ಯ ಸರ್ಕಾರ ಈಡೇರಿಸಲು ಮುಂದಾಗಬೇಕು ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಜೇಶನ್ ವತಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಿದೆ.

ನಗರದ ಡಿ ಆರ್.ಎಂ. ಪದವಿ ಕಾಲೇಜಿನಿಂದ ಮೆರವಣಿಗೆ ಆರಂಭಿಸಿದ ಪ್ರತಿಭಟನಾಕಾರರು, ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆಯ ಮುಖಾಂತರ ಸಂಚರಿಸಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರಿಗೆ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಮಾತನಾಡಿದ ವಿದ್ಯಾರ್ಥಿ ಮುಖಂಡರು, ರಾಜ್ಯ ವ್ಯಾಪಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ಕಳೆದ ಇಪ್ಪತ್ತು ದಿನಗಳಿಂದ ತರಗತಿ ಬಹಿಷ್ಕಾರ ಮಾಡಿ ಹೋರಾಟ ಮಾಡುತ್ತಿದ್ದಾರೆ. ಇತ್ತೀಚೆಗೆ ತೀರ್ಥಹಳ್ಳಿ ಸರ್ಕಾರಿ ಪದವಿ ಕಾಲೇಜಿನ ಉಪನ್ಯಾಸಕ ಹರ್ಷ ಶಾನುಭೋಗ ಅವರ ಆತ್ಮಹತ್ಯೆ ಘಟನೆ ಉಪನ್ಯಾಸಕರ ಅತ್ಯಂತ ಕಷ್ಟಮಯ ಜೀವನವನ್ನು ತೋರಿಸುತ್ತದೆ ಎಂದಿದ್ದಾರೆ.

ಉದ್ಯೋಗದ ಭದ್ರತೆ ಇಲ್ಲದೆ ಮತ್ತು ಹಲವಾರು ತಿಂಗಳಲ್ಲಿ ಸಂಬಳವೇ ಇಲ್ಲದ ಸಾವಿರಾರು ಅತಿಥಿ ಉಪನ್ಯಾಸಕರು ಕಷ್ಟದಲ್ಲಿದ್ದಾರೆ. ಉನ್ನತ ಪದವಿ, ಎನ್.ಇ.ಟಿ ಆದವರು, ಡಾಕ್ಟರೇಟ್ (2ನೇ ಪುಟಕ್ಕೆ)

## 37,379 ಕೊರೊನಾ ಪ್ರಕರಣಗಳು ಪತ್ತೆ

ನವದೆಹಲಿ, ಜ. 4 - ಮಂಗಳವಾರ ದೇಶದಲ್ಲಿ 37,379 ಕೊರೊನಾ ಪ್ರಕರಣಗಳು ಕಂಡು ಬಂದಿವೆ. ಇದೇ ದಿನ 124 ಜನ ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ದಿನ 23 ರಾಜ್ಯಗಳಲ್ಲಿ 1,892 ಓಮಿಕ್ರಾನ್ ರೂಪಾಂತರಿ ಸೋಂಕಿತರನ್ನು ಖಚಿತ ಪಡಿಸಲಾಗಿದೆ. ಕೊರೊನಾ ಪಾಸಿಟಿವ್ ದರ ಶೇ.3.24ಕ್ಕೆ ತಲುಪಿದೆ.


### ಸವಿನೆನಪು



**ದಿ॥ ಶ್ರೀಮತಿ ಲಕ್ಷ್ಮಿಬಾಯಿ ಲಾಲ್ಯಾನಾಯ್ಕ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು, ಸದಾ ನಿಮ್ಮ ಸ್ಮರಣೆ ಮತ್ತು ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪುತ್ರರು-ಸೊಸೆ :
- ✦ ವಿಶ್ವನಾಥ್ ಜೆ.ಎಲ್. ಮತ್ತು ಶ್ರೀಮತಿ ಶ್ರೀದೇವಿ ಸಿ.ಎನ್.
- ✦ ಅಮರನಾಥ್ ಜೆ.ಎಲ್.

ಪುತ್ರಿಯರು-ಅಳಿಯಂದಿರು :
- ✦ ಶ್ರೀಮತಿ ರಜನಿ ಎನ್. ನಾಯ್ಕ ಮತ್ತು ಎನ್.ಯು. ನಾಗರಾಜ್
- ✦ ಶ್ರೀಮತಿ ಕಾತ್ಯಾಯಿನಿ ಜೆ.ಎಲ್. ಮತ್ತು ಸುರೇಶ್ ಎಲ್.
- ✦ ಶ್ರೀಮತಿ ಶಾಲಿನಿ ಜೆ.ಎಲ್. ಮತ್ತು ಡಾ.ಸಂತೋಷ್ ಎ.ಆರ್.

ಮೊಮ್ಮಕ್ಕಳು :
- ✦ ದೇವ್ ಎನ್. ನಾಯ್ಕ್ ✦ ಶ್ರೇಷ್ಠಾ ಎನ್. ನಾಯ್ಕ್
- ✦ ಅರ್ಜುನ್‌ಲಾಲ್ ಪವಾರ್ ವಿ. ✦ ಆದಿತ್ಯ ಎಸ್.

॥ ಶ್ರೀ ಬಸವೇಶ್ವರ ಪ್ರಸನ್ನ ॥

### ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ



ಶ್ರೀಪುಟ್ಟನಗೌಡ ಉಡೇದ,
ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 25.12.2021ನೇ ಶನಿವಾರ ಬೆಳಿಗ್ಗೆ 10.30ಕ್ಕೆ
ನನ್ನ ಧರ್ಮಪತ್ನಿಯವರಾದ
ಶ್ರೀಮತಿ ಹೆಚ್.ಪಿ. ಸಾವಿತ್ರಮ್ಮ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 6.01.2022ನೇ ಗುರುವಾರ, ಬೆಳಿಗ್ಗೆ 11 ಕ್ಕೆ ದಾವಣಗೆರೆ ಜಿಲ್ಲಾ ನಿವೃತ್ತ ನೌಕರರ ಭವನ, ಎಂ.ಸಿ.ಸಿ. 'ಬಿ' ಬ್ಲಾಕ್, ಬಾಪೂಜಿ ಸ್ಕೂಲ್ ಹತ್ತಿರ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
ಶ್ರೀ ಪುಟ್ಟನಗೌಡ ಉಡೇದ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಮೊ: 99008 37148, 89703 57140

### ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ವಿಜಯಲಕ್ಷ್ಮಿ ಆವರಗೆರೆ ಶೇಖರ್**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು...
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಶ್ರೀ ಎ.ಎನ್. ಶೇಖರ್
ಮಕ್ಕಳಾದ : ಶ್ರೀಮತಿ ಸೌಮ್ಯ ಶ್ರೀ ಟಿ. ರಾಮಚಂದ್ರಪ್ಪ ಮತ್ತು ಮಕ್ಕಳು
ಶ್ರೀ ಚಂದ್ರಕಾಂತ್ ಶ್ರೀಮತಿ ನಯನ ಮತ್ತು ಮಕ್ಕಳು
ಶ್ರೀಮತಿ ರೇಣುಕಾ ದಿ॥ ನಾಗರಾಜು ಎಂ.ಎಸ್ ಮತ್ತು ಮಕ್ಕಳು
ಶ್ರೀ ಡಾ॥ ಪ್ರಶಾಂತ್ ಶ್ರೀಮತಿ ಶರ್ಮಿಳಾ ಮತ್ತು ಮಕ್ಕಳು
ಹಾಗೂ ಆವರಗೆರೆ ಬಂಧುಗಳು-ಮಿತ್ರರು


## ಸಾವಯವ ಆಹಾರದಿಂದ ಶಕ್ತಿ, ಚೈತನ್ಯ ವೃದ್ಧಿ

### ಕದಳಿ ಮಹಿಳಾ ವೇದಿಕೆಯ 13ನೇ ವಾರ್ಷಿಕೋತ್ಸವದಲ್ಲಿ ಈಶ್ವರನ್ ಪಿ.ತೀರ್ಥ



ದಾವಣಗೆರೆ, ಜ.4- ಸಾವಯವ ಆಹಾರ ಹಾಗೂ ಸಿರಿಧಾನ್ಯಗಳ ಬಳಕೆಯಿಂದ ಉತ್ತಮ ಆರೋಗ್ಯ ಗಳಿಸಿಕೊಳ್ಳುವ ಜೊತೆಗೆ ಜೀವನದಲ್ಲಿ ಚೈತನ್ಯ ಹಾಗೂ ಶಕ್ತಿ ತಂದುಕೊಳ್ಳಬಹುದಾಗಿದೆ ಎಂದು ಸಾವಯವ ಕೃಷಿಕರೂ, ವಿಶೇಷ ಆಹಾರ ತಜ್ಞರೂ ಆಗಿರುವ ಈಶ್ವರನ್ ಪಿ.ತೀರ್ಥ ಹೇಳಿದರು.

ನಗರದ ತರಳಬಾಳು ಸಭಾ ಭವನದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಕದಳಿ ಮಹಿಳಾ ವೇದಿಕೆಯ 13ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಉಪನ್ಯಾಸ ನೀಡಿದರು.

**ಅನುಸೂಯದೇವಿ ಟಿ.ಎಸ್. ಪಾಟೀಲ್ ಅವರಿಗೆ 'ಕದಳಿಶ್ರೀ' ಪುರಸ್ಕಾರ**

ನಮ್ಮ ದೇಶದಲ್ಲಿ ನಿರಾಯಾಸವಾಗಿ ನೂರು ವರ್ಷ ಬದುಕುತ್ತಿದ್ದ ಜನ ಬದಲಾದ ಆಹಾರ ಪದ್ಧತಿ, ಜೀವನ ಶೈಲಿಯಿಂದಾಗಿ ಇಂದು ಆಯಾಸದಿಂದಲೇ 60 ವರ್ಷ ಬಾಳಿದರೆ ಸಾಕು ಎನ್ನುವಂತಾಗಿದೆ. ವಿಜ್ಞಾನ ಹಾಗೂ ತಂತ್ರಜ್ಞಾನ ಎಷ್ಟೇ ಮುಂದುವರೆದರೂ, ಉತ್ತಮ ಆಹಾರದ ಉತ್ಪಾದನೆಯಲ್ಲಿ ವಿಫಲವಾಗಿದೆ. ಮುಂದುವರಿದ ವಿಜ್ಞಾನವು ಹೆಚ್ಚಾಗಿ ಮತ್ತೊಬ್ಬರನ್ನು ನಾಶ ಮಾಡುವತ್ತಲೇ ಕೈ ತೋರಿಸುತ್ತಿದೆ. ಆದರೆ ಉತ್ತಮ ಆಹಾರದ ಮೂಲಕ ಮನುಷ್ಯನ ಜೀವಿತಾವಧಿಯನ್ನು ಹೆಚ್ಚಿಸಲು ವಿಫಲವಾಗಿದೆ ಎಂದರು

ಸಿರಿಧಾನ್ಯಗಳ ಬಳಕೆ ಕುರಿತು ಜನರಲ್ಲಿ ಅನೇಕ ಗೊಂದಲಗಳಿವೆ. ಶಿವ ಪುರಾಣದಲ್ಲಿ ಅನ್ನಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಿದ್ದರೆ, ವಿಷ್ಣು ಪುರಾಣದಲ್ಲಿ ಸಿರಿಧಾನ್ಯಕ್ಕೆ ಮಹತ್ವ ನೀಡಲಾಗಿದೆ. ಆಧುನಿಕ ಜೀವನ ಶೈಲಿ, ವಿಕಾರವಾದ ಜೀವನಕ್ಕೆ ಉತ್ತಮ ಆಕಾರ ಕೊಡುವಲ್ಲಿ ಸಿರಿಧಾನ್ಯಗಳ ಪಾತ್ರ ಮಹತ್ವದ್ದು ಎಂದರು.

ಆಹಾರದ ವಿಷಯದಲ್ಲಿ ಚೀನಾ ದೇಶದವರು ಮುಂದಿದ್ದರೆ, ಭಾರತದಲ್ಲಿ ಉತ್ತಮ ಆಹಾರ ಸೇವಿಸದೆ, ರಾಸಾಯನಿಕ (2ನೇ ಪುಟಕ್ಕೆ)

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು
1) ನರ್ಸ್ ಅಂಡ್ ಬ್ರದರ್
2) ರಿಸೆಪ್ಷನಿಸ್ಟ್ /
ಮೆಡಿಕಲ್ ಅಸಿಸ್ಟೆಂಟ್ ಬೇಕಾಗಿದ್ದಾರೆ.
77607-39990

**ಸೈಟ್‌ಗಳು ಮಾರಾಟಕ್ಕಿವೆ**
20x30 East, 20x30 East ಎರಡು ಸೈಟ್‌ಗಳು ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, 40x63 West, 70x63 Corner, 30x63 Corner ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**Industrial ಸೈಟ್‌ಗಳು ಮಾರಾಟಕ್ಕಿವೆ**
40x68 ಅಡಿ ಅಳತೆಯ ಜೋಡಿ ಸೈಟುಗಳು ಸೋನಾಲಿಕಾ ಟ್ರ್ಯಾಕ್ಟರ್ ಶೋ ರೂಮ್ ಹಿಂಭಾಗ, ಪಿ.ಬಿ.ರಸ್ತೆ ದಾವಣಗೆರೆ. ಸಂಪರ್ಕಿಸಿ :
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**ಮಾರಾಟಕ್ಕಿವೆ**
ಹೊಸದಾಗಿ ಮಾಡಿಸಿದ ಪ್ಲೈವುಡ್ ಗ್ಲಾಸ್ ಸೇಲ್ಫ್‌ನ ರ್‍ಯಾಕ್‌ಗಳು ಮಾರಾಟಕ್ಕಿವೆ.
ಆಸಕ್ತರು ಸಂಪರ್ಕಿಸಿರಿ.
97434 47076

**WANTED**
1. Order Booking Boy
2. Delivery Boys
A.K.TRADERS
Ashirwad
Bapuji Hospital Road
P.J Extension, Davangere-4.

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೆರೆ ಹೋಬಳಿ, ಹರಪನಹಳ್ಳಿ ತಾಲ್ಲೂಕು. ಸರ್ವೆ ನಂ.335/A- 4.08 ಸೆಂಟ್ಸ್, ಸರ್ವೆ ನಂ.335/B- 2.43 ಸೆಂಟ್ಸ್. ಒಟ್ಟು 6.51 ಸೆಂಟ್ಸ್, 2 ಪಂಪ್ ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
ಸಂಪರ್ಕಿಸಿ: 9972602950

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು 05.01.2022ರ ಬುಧವಾರ ಮತ್ತು ನಾಳೆ 06.01.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲ್ಯಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ.
ಇಂಜಿನಿಯರ್ ಮತ್ತು ಕಾಂಟ್ರ್ಯಾಕ್ಟರ್ಸ್
ಮೊ. : 98455 83340

**WANTED**
1) Receptionist - 02
2) Office Admin - 02
POOJA DIAGNOSTIC & HEALTH CARE, DAVANGERE
3rd main, 8th cross
P.J. Extension
08192 232075, 98443 26560

**ಬಂಗಲೆ ಅಪಾರ್ಟ್‌ಮೆಂಟ್ ಸೈಟ್ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ 40 ಅಡಿ ರಸ್ತೆಗೆ ಸುತ್ತಲು ಮನೆಗಳು ಇರುವ ಜಾಗದಲ್ಲಿ 105x91 ಸೈಟು ಮಾರಾಟಕ್ಕಿದೆ.
98440 84229, 98448 82366

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡಬಾತಿ) ಸಂಪರ್ಕಿಸಿ.
88920 08800

**ಕಾರ್ ಮಾರಾಟಕ್ಕಿದೆ**
ಉತ್ತಮ ಕಂಡೀಷನ್‌ನಲ್ಲಿ ಇರುವ XUV-500 Mahendra Car ಮಾರಾಟಕ್ಕಿದೆ. ಮಾಡೆಲ್-2014
ಸಂಪರ್ಕಿಸಿ :
ಫೋ. : 78991 77660

**Dog Boarding**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, ಡ್ಯುಪ್ಲೆಕ್ಸ್ ಹೌಸ್, 2 BHK (ಸಸ್ಯಹಾರಿಗಳಿಗೆ ಮಾತ್ರ) ಪಿ.ಜೆ. ಬಡಾವಣೆ, 5ನೇ ಮೇನ್, ದಾವಣಗೆರೆ.
ಫೋ. : 63609 20353

**ಮನೆ ಲೀಸ್‌ಗೆ ಇದೆ**
ಶ್ರೀರಾಮಾಂಜನೇಯ ನಿಲಯ, ಮನೆ. ನಂ. 184/11/94 ಸುಬ್ರಮಣ್ಯ ನಗರ, 41ನೇ ವಾರ್ಡ್, ಎಸ್.ಎಸ್. ಹಾಸ್ಪಿಟಲ್, ಹತ್ತಿರ
99166 31355, 94822 41415

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

GST Registration- Retturns Filing INCOME TAX & GST CASE, Project Reports and for Accounts Maintenances
Contact
MEGHANA ASSOCIATES (R)
99809 16126

NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ
MEGHANA ASSOCIATES (R)
99809 16126

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**House To-Let**
2BHK 'Santrupthi'
# 1640/66-67, Saraswati Badavane, Davanagere.
Veg only
94484 46708

**ಕೆಲಸಕ್ಕೆ ಬೇಕಾಗಿದ್ದಾರೆ**
NISARGA ENTERPRISES INTERIOR AND EXTERIOR DESIGNER OFFICE ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಯುವಕ/ಯುವತಿಯರು, ದಾವಣಗೆರೆ ಮತ್ತು ಶಿವಮೊಗ್ಗ ಆಫೀಸಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದ ಜೊತೆಗೆ ಇನ್ಸೆಂಟಿವ್ (Incentive) ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: Mr. SRINIVAS. Y
94485 34659, 83100 92069

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಹೋಟೆಲ್ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಹೋಟೆಲ್ ಬಾಡಿಗೆಗೆ ಇದೆ. ಸಂಪರ್ಕಿಸಿ
70193 10599

**ಕೆಲಸಗಾರರು ಬೇಕಾಗಿದ್ದಾರೆ**
ಗ್ಲಾಸ್ ಮತ್ತು ಪ್ಲೈವುಡ್ ಅಂಗಡಿಯಲ್ಲಿ ಅನುಭವ ಇರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
94483 76399

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**3BHK ಮನೆ ಲೀಸ್/ಬಾಡಿಗೆಗೆ**
ಎಂ.ಸಿ.ಸಿ. 'ಎ' ಬ್ಲಾಕ್, ಸಾಯಿಬಾಬಾ ದೇವಸ್ಥಾನದ ರಸ್ತೆಯಲ್ಲಿ 3 ಬೆಡ್‌ರೂಂ ಇರುವ ಕಮರ್ಷಿಯಲ್ ಉದ್ದೇಶಕ್ಕೆ, ಕ್ಲಿನೀಕ್, ಬ್ಯಾಂಕ್, ಆಫೀಸ್ ಇತರೆ ಆಫೀಸ್‌ಗಳಿಗೆ ಅನುಕೂಲವಾಗಿರುವ ಮನೆ ಲೀಸ್‌ಗೆ ಅಥವಾ ಬಾಡಿಗೆಗೆ ಇದೆ. ಸಂಪರ್ಕಿಸಿ
98442 59343
99869 46030

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗು ತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. - ಜಾಹೀರಾತು ವ್ಯವಸ್ಥಾಪಕರು


## ಶ್ರೀಮತಿ ಮಂಗಳಮ್ಮ ನಲ್ಲೊಡೆ ನಿಧನ



ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಕೆರೆ ಭೀರನಹಳ್ಳಿ ವಾಸಿ **ಶ್ರೀಮತಿ ಮಂಗಳಮ್ಮ ನಲ್ಲೊಡೆ** (68) ಇವರು 4.01.2022 ರ ಮಂಗಳವಾರ ಸಂಜೆ 6.30ಕ್ಕೆ ದಿನಾಂಕ ನಿಧನರಾಗಿರುತ್ತಾರೆ. ನಾಲ್ವರು ಪುತ್ರರು ಹಾಗೂ ಪುತ್ರಿಯರು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.01.2022ನೇ ಬುಧವಾರ ಬೆಳಿಗ್ಗೆ 11.30ಕ್ಕೆ ಭದ್ರಾವತಿ ತಾಲ್ಲೂಕು ಕೆರೆ ಭೀರನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಸುದರ್ಶನ ಸೌಂಡ್ಸ್ ಅಂಡ್ ಲೈಟ್ಸ್, ದಾವಣಗೆರೆ.

## ಬೊಮ್ಮೇನಹಳ್ಳಿ ಶರಣಪ್ಪ ನಿಧನ




ದಾವಣಗೆರೆ ತಾಲ್ಲೂಕು ಬೊಮ್ಮೇನಹಳ್ಳಿ ಗ್ರಾಮದ ವಾಸಿ
**ಎಂ. ಶರಣಪ್ಪ**
ಅವರು ದಿನಾಂಕ 4.01.2022 ರ ಮಂಗಳವಾರ ಮಧ್ಯಾಹ್ನ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 92 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.01.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಬೊಮ್ಮೇನಹಳ್ಳಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ
ಎಂ.ಎಸ್. ವಿಜಯಕುಮಾರ, ನಿಜಗುಣ ಶಿವಯೋಗಿ
ಮೊ: 98444 02144


**ಬೇಕಾಗಿದ್ದಾರೆ**
ಟೈಲರಿಂಗ್ ಕೆಲಸಕ್ಕೆ ಮಹಿಳೆಯರು - 10, ಸಹಾಯಕರು - 10, ಫೀಲ್ಡ್ ವರ್ಕರ್ಸ್ ಬೇಕಾಗಿದ್ದಾರೆ.
88614 38237

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಇಂಗ್ಲೀಷ್ ಓದಲು, ಬರೆಯಲು ಬರಬೇಕು. ಆಸಕ್ತಿ ಇದ್ದಲ್ಲಿ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ
98800 42597, 94807 95548

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.



**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮ ವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಕುಡುಕರ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ದಾವಣಗೆರೆ
ಮೊ : 8133933804


## ವರ್ತನೆಗೆ ಖಂಡನೆ

**(1ನೇ ಪುಟದಿಂದ)** ಜಾಧವ್ ಮಾತನಾಡಿ, ರಾಮನಗರದಲ್ಲಿ ಸಿಎಂ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದ ಡಿ.ಕೆ. ಸುರೇಶ್ ತಕ್ಷಣವೇ ಜನರ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ರಾಜ್ಯದಲ್ಲಿ ಒಬ್ಬನೇ ಕಾಂಗ್ರೆಸ್ ಸದಸ್ಯನಿದ್ದು, ಗೂಂಡಾನಂತೆ ವರ್ತಿಸಿದ್ದಾರೆ. ಕಾಂಗ್ರೆಸ್‌ಗೆ ಜನ ಪಾಠ ಕಲಿಸಿದರೂ ಬುದ್ದಿ ಬಂದಿಲ್ಲ. ಡಿ.ಕೆ. ಸುರೇಶ್ ವರ್ತನೆಯಿಂದ ರಾಜಕಾರಣಿಗಳು ತಲೆ ತಗ್ಗಿಸುವಂತೆ ಆಗಿದೆ. ಅದರಲ್ಲೂ ವಿಪ ಸದಸ್ಯ ರವಿಕುಮಾರ್ ಅವರು ಸಚಿವ ಅಶ್ವತ್ಥ್ ನಾರಾಯಣ ಅವರ ಕೈಯಲ್ಲಿದ್ದ ಮೈಕನ್ನು ಕಿತ್ತು ರಂಪಾಟ ಮಾಡಿದ್ದಾರೆ. ಇವರಿಬ್ಬರೂ ಬಹಿರಂಗ ಕ್ಷಮೆಯಾಚನೆ ಮಾಡುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ನಮ್ಮ ಸರ್ಕಾರ ಪರಿಸರ ಇಲಾಖೆಯಿಂದ ಅನುಮತಿ ಪಡೆಯಲು ಮುಂದಾಗಿದ್ದರೂ ಕಾಂಗ್ರೆಸ್ ನಾಯಕರು ಪಾದಯಾತ್ರೆ ಕೈಗೊಂಡಿದ್ದಾರೆ. ಈ ಯೋಜನೆಯನ್ನು ಈಗ ರಾಜಕಾರಣಕ್ಕೆ ಬಳಸುತ್ತಿರುವ ಕಾಂಗ್ರೆಸ್ಸಿಗರು ಅವರ ಅಧಿಕಾರದ ಅವಧಿಯಲ್ಲಿ ಏಕೆ ಅನುಷ್ಠಾನ ಮಾಡಿರಲಿಲ್ಲ. ಕಾಂಗ್ರೆಸ್‌ನವರು ಪಾದಯಾತ್ರೆ ನಡೆಸಿ ಅಧಿಕಾರಕ್ಕೆ ಬರುತ್ತೇವೆ ಎಂಬ ಭ್ರಮೆಯಲ್ಲಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಸದಸ್ಯರಾದ ಎಲ್.ಡಿ.ಗೋಣೆಪ್ಪ, ಕೆ.ಪ್ರಸನ್ನ ಕುಮಾರ್, ಆರ್.ಎಲ್. ಶಿವಪ್ರಕಾಶ್, ಕೆ.ಎಂ.ವೀರೇಶ್, ಮುಖಂಡರಾದ ಜಯಲಕ್ಷ್ಮಿ ಮಹೇಶ್, ರಾಜನಹಳ್ಳಿ ಶಿವಕುಮಾರ್, ವೈ.ಮಲ್ಲೇಶ್, ಉಮೇಶ್ ಪಾಟೀಲ್, ಮಜೀದ್, ಟಿಂಕರ್ ಮಂಜಣ್ಣ, ಶಂಕರಗೌಡ ಬಿರಾದಾರ್, ಭಾಗ್ಯ ಪಿಸಾಳೆ, ಹೆಚ್.ಪಿ. ವಿಶ್ವಾಸ್, ಶಿವರಾಜ್ ಪಾಟೀಲ್, ಶಿವಾನಂದ್, ಶಿವನಗೌಡ ಪಾಟೀಲ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಡಿಕೆ ಸಹೋದರರು ಭಸ್ಮಾಸುರರಿದ್ದಂತೆ



**ಡಿ.ಕೆ. ಸುರೇಶ್ ನಡವಳಿಕೆ ಖಂಡಿಸಿ ಹೊನ್ನಾಳಿಯಲ್ಲಿ ನಡೆದ ಬಿಜೆಪಿ ಪ್ರತಿಭಟನೆಯಲ್ಲಿ ಶಾಸಕ ರೇಣುಕಾಚಾರ್ಯ**

ಹೊನ್ನಾಳಿ, ಜ.4- ಗೂಂಡಾ ಸಂಸ್ಕೃತಿಯ ಡಿ.ಕೆ.ಸುರೇಶ್ ಮತ್ತವರ ಸಹೋದರ - ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕನಕಪುರದ ಬಂಡೆಗಳಲ್ಲ, ಬದಲಿಗೆ ಭಸ್ಮಾಸುರರಿದ್ದಂತೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಶಾಸಕ ಎಂ.ಪಿ. ರೇಣುಕಾಚಾರ್ಯ ಲೇವಡಿ ಮಾಡಿದರು.

ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರ ನಡವಳಿಕೆಯನ್ನು ಖಂಡಿಸಿ, ತಾಲ್ಲೂಕು ಬಿಜೆಪಿ ವತಿಯಿಂದ ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಇಂದು ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೇಂದ್ರ, ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಅಧಿಕಾರಕ್ಕೆ ಬಂದ ಮೇಲೆ ಗೂಂಡಾ ಸಂಸ್ಕೃತಿ ಬದಲಾಗಿದ್ದು, ಜನರ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಅಧಿಕಾರಕ್ಕೆ ಬರಲು ಸಾಧ್ಯ ಎಂಬುದನ್ನು ಸುರೇಶ್ ತಿಳಿದುಕೊಳ್ಳಬೇಕು ಎಂದರು. ಡಿ.ಕೆ. ಸುರೇಶ್ ಅವರು ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಮಾತನಾಡಿ, ಕಾಂಗ್ರೆಸ್ ಕೇವಲ ಜಾತಿ ಮತ್ತು ಓಟ್ ಬ್ಯಾಂಕ್ ರಾಜಕಾರಣ ಹಾಗೂ ದಬ್ಬಾಳಿಕೆಗಳ ಮೂಲಕ ಅಧಿಕಾರ ಮಾಡಿಕೊಂಡು ಬಂದಿದ್ದು, ಇದೀಗ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಹೇಳಿದರು.

ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ನೂರಾರು ಜನ ಕಾರ್ಯಕರ್ತರು, ಮುಖಂಡರು ಸೇರಿ ಡಿ.ಕೆ. ಸುರೇಶ್ ಅವರ ಪ್ರತಿಕೃತಿಯನ್ನು ದಹನ ಮಾಡುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾ. ಅಧ್ಯಕ್ಷ ಜೆ.ಕೆ. ಸುರೇಶ್ ಮತ್ತಿತರರು ಮಾತನಾಡಿದರು. ಪುರಸಭೆ ಅಧ್ಯಕ್ಷ ಬಾಬು ಹೋಬಳದಾರ್, ಉಪಾಧ್ಯಕ್ಷೆ ರಂಜಿತ ಚನ್ನಪ್ಪ ವಡ್ಡಿ, ಮುಖಂಡರಾದ ಶಾಂತರಾಜ್ ಪಾಟೀಲ್, ಅರಕೆರೆ ಎ.ಬಿ. ಹನುಮಂತಪ್ಪ, ನಾಗರಾಜ್, ಜಿ.ಪಂ.ಮಾಜಿ ಸದಸ್ಯ ಎಂ.ಆರ್.ಮಹೇಶ್, ತಾ.ಪಂ. ಮಾಜಿ ಸದಸ್ಯ ಸಿ.ಆರ್. ಶಿವಾನಂದ್, ರಂಗಪ್ಪ, ಕುಬೇಂದ್ರಪ್ಪ, ಜಿ.ಪಂ. ಮಾಜಿ ಉಪಾಧ್ಯಕ್ಷ ಕೆ.ವಿ. ಚನ್ನಪ್ಪ ಹಾಗು ಇತರರಿದ್ದರು.

## ರಾಜ್ಯ ಸರ್ಕಾರದ ನೂತನ ಕೊರೊನಾ ಮಾರ್ಗಸೂಚಿಗಳು :

## ಇಡೀ ರಾಜ್ಯದಲ್ಲಿ ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ

- ಎಲ್ಲಾ ಕಚೇರಿಗಳು ಸೋಮವಾರದಿಂದ ಶುಕ್ರವಾರದವರೆಗೆ ಐದು ದಿನ ಕಾರ್ಯನಿರ್ವಹಿಸಬೇಕು
- ಅಧೀನ ಕಾರ್ಯದರ್ಶಿಗಿಂತ ಕೆಳಗಿನ ಹಂತದ ಕಚೇರಿಗಳಲ್ಲಿ ಶೇ.50 ಸಿಬ್ಬಂದಿ
- ಪಬ್, ಕ್ಲಬ್, ರೆಸ್ಟೋರೆಂಟ್, ಬಾರ್, ಹೋಟೆಲ್ ಇತ್ಯಾದಿ ತಾಣಗಳು ಶೇ.50ರಷ್ಟು ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಣೆ
- ಸಿನೆಮಾ, ಮಲ್ಟಿಪ್ಲೆಕ್ಸ್, ರಂಗಮಂದಿರ, ಆಡಿಟೋರಿಯಂಗಳಲ್ಲಿ ಶೇ.50ರಷ್ಟು ಜನರು, ಎಲ್ಲರೂ ಲಸಿಕೆ ಪಡೆದಿರಬೇಕು
- ಬಯಲು ಪ್ರದೇಶಗಳಲ್ಲಿ ನಡೆಯುವ ಮದುವೆಗಳಲ್ಲಿ 200 ಹಾಗೂ ಛತ್ರಗಳಲ್ಲಿ ನಡೆಯುವ ಮದುವೆಗಳಲ್ಲಿ 100 ಜನರಿಗೆ ಮಾತ್ರ ಅವಕಾಶ
- ಧಾರ್ಮಿಕ ಸ್ಥಳಗಳಲ್ಲಿ 50 ಜನರಿಗೆ ಮಾತ್ರ ದರ್ಶನಕ್ಕೆ ಅವಕಾಶ. ಸೇವೆಗಳಿಗೆ ಅನುಮತಿ ಇಲ್ಲ
- ಈಜುಕೊಳ, ಜಿಮ್‌ಗಳಲ್ಲಿ ಶೇ.50ರಷ್ಟು ಜನರಿಗೆ ಅವಕಾಶ, ಲಸಿಕೆ ಪಡೆದಿರಬೇಕು
- ಕ್ರೀಡಾ ಸಂಕೀರ್ಣ, ಕ್ರೀಡಾಂಗಣಗಳಲ್ಲಿ ಶೇ.50ರಷ್ಟು ಜನರಿಗೆ ಅವಕಾಶ
- ಎಲ್ಲ ಸಮಾವೇಶಗಳು, ಧರಣಿ ಹಾಗೂ ಪ್ರತಿಭಟನೆಗಳ ನಿಷೇಧ

### ವಾರಾಂತ್ಯದ ಕರ್ಫ್ಯೂ ನಿಯಮಗಳು

- ಶುಕ್ರವಾರ ರಾತ್ರಿ 8ರಿಂದ ಸೋಮವಾರ ಬೆಳಿಗ್ಗೆ 5ರವರೆಗೆ ಕರ್ಫ್ಯೂ
- ತುರ್ತು ಸೇವೆಗಳಲ್ಲಿ ತೊಡಗಿರುವ ಸರ್ಕಾರಿ ಸಂಸ್ಥೆಗಳು, ನಿಗಮಗಳು ಇತ್ಯಾದಿಗಳಿಗೆ ಅವಕಾಶ
- ಕೈಗಾರಿಕೆಗಳಿಗೆ ಕರ್ಫ್ಯೂ ವಿನಾಯಿತಿ, ನೌಕರರು ಗುರುತಿನ ಚೀಟಿ ಹೊಂದಿರಬೇಕು
- ರೋಗಿಗಳು, ಅವರಿಗೆ ನೆರವು ನೀಡುವರು, ಲಸಿಕೆ ಪಡೆಯುವವರಿಗೆ ಅನುಮತಿ
- ದಿನಸಿ, ಹಾಲು ಇತ್ಯಾದಿ ಅಂಗಡಿಗಳಿಗೆ ಅನುಮತಿ
- ರೆಸ್ಟೋರೆಂಟ್ - ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಅನುಮತಿ
- ರೈಲು, ವಿಮಾನಗಳ ಸಂಚಾರಕ್ಕೆ ಅನುಮತಿ. ಸೂಕ್ತ ದಾಖಲೆಗಳೊಂದಿಗೆ ಜನರ ಪ್ರಯಾಣಕ್ಕೆ ಅವಕಾಶ

## ವಾರಾಂತ್ಯ ಕರ್ಫ್ಯೂ, ಶೇ.50ರ ಮಿತಿ

**(1ನೇ ಪುಟದಿಂದ)** ಬಂದಿದ್ದವು. ಈಗಲೂ ಶೇ.90ರಷ್ಟು ಪ್ರಕರಣಗಳು ಬೆಂಗಳೂರಿನಲ್ಲೇ ಕಂಡು ಬರುತ್ತಿವೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಪ್ರತ್ಯೇಕ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದವರು ಹೇಳಿದ್ದಾರೆ.

ಬಸ್ ಹಾಗೂ ಮೆಟ್ರೋಗಳಲ್ಲಿ ಪ್ರತ್ಯೇಕ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು.

ಈ ಸಂದರ್ಭದಲ್ಲಿ ಮಾತನಾಡಿರುವ ಆರೋಗ್ಯ ಸಚಿವ ಡಾ. ಸುಧಾಕರ್, ಯಾವುದೇ ಸಂಘ – ಸಂಸ್ಥೆಗಳ ಸಮಾರಂಭವಾದರೂ ಕಡಿವಾಣ ಹಾಕಬೇಕಿದೆ. ಮೂರು ದಿನಗಳ ಹಿಂದಿನವರೆಗೂ 0.16 ರಷ್ಟಿದ್ದ ಪಾಸಿಟಿವ್ ಪ್ರಮಾಣ ಈಗ ಶೇ.3ಕ್ಕೂ ಹೆಚ್ಚಾಗಿದೆ. ಹೀಗಾಗಿ ಅತಿ ಹೆಚ್ಚು ಎಚ್ಚರಿಕೆ ವಹಿಸಬೇಕು ಎಂದಿದ್ದಾರೆ.

ಕಳೆದ ಎರಡು ಅಲೆಗಳಲ್ಲಿ ಬೆಂಗಳೂರಿನಲ್ಲಿ ಅತಿ ಹೆಚ್ಚು ಪ್ರಕರಣಗಳು ಕಂಡು ಬರುತ್ತಿದ್ದವು. ಈ ಬಾರಿಯೂ ಅದೇ ಪರಿಸ್ಥಿತಿ ಇದೆ. ಹೀಗಾಗಿ ಬೆಂಗಳೂರನ್ನು ಪ್ರತ್ಯೇಕವಾಗಿ ಪರಿಗಣಿಸಿ ಇಲ್ಲಿ ಬೇರೆ ಯೋಜನೆ ಜಾರಿಗೆ ತರಲಾಗುವುದು ಎಂದು ಸುಧಾಕರ್ ತಿಳಿಸಿದ್ದಾರೆ.

## ಉಪನ್ಯಾಸಕರ ಬೇಡಿಕೆಗೆ ಒತ್ತಾಯ

**(1ನೇ ಪುಟದಿಂದ)** ಮಾಡಿರುವವರು 15 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸಿದ್ದಾರೆ. ಆದರೆ ಇವರು ಗೌರವಯುತ ಬದುಕು ಸಾಗಿಸಲು ಕನಿಷ್ಠ ಭದ್ರತೆ ಸಂಬಳ ದೊರಕಿಸುವಲ್ಲಿ ಸರ್ಕಾರದ ಸ್ಪಂದನೆ ದೊರಕದೇ ಇರುವುದು ಅತ್ಯಂತ ಬೇಸರದ ವಿಚಾರ. ಶಿಕ್ಷಕರು ತರಗತಿ ಬಹಿಷ್ಕಾರ ಮಾಡಿ ಹೋರಾಟದಲ್ಲಿ ಇರುವುದರಿಂದ ಶೈಕ್ಷಣಿಕ ಏರುಪೇರುಗಳು ಉಂಟಾಗಿವೆ. ಈ ಶೈಕ್ಷಣಿಕ ಗೊಂದಲಕ್ಕೆ ಸರ್ಕಾರ ಈ ಕೂಡಲೇ ಪರಿಹಾರ ಕಲ್ಪಿಸಬೇಕಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪೂಜಾ ನಂದಿಹಳ್ಳಿ, ಮಾರುತಿ, ಗಜೇಂದ್ರ, ಪ್ರವೀಣ್, ಜಶವಂತ್, ಶರತ್, ಇತರರು ಹಾಜರಿದ್ದರು.

## ಜ್ಯೋತಿಷಿ ಆನಂದ ತೀರ್ಥಾಚಾರ್ ಅವರಿಗೆ ಮಾತೃ ವಿಯೋಗ



ದಾವಣಗೆರೆ, ಜ.4 - ಖ್ಯಾತ ಜ್ಯೋತಿಷಿ ಮಧ್ವ ಯುವಕ ಸಂಘದ ಮಾಜಿ ಅಧ್ಯಕ್ಷರು ಹಾಗೂ ಬ್ರಾಹ್ಮಣ ಸಮಾಜದ ಮುಖಂಡರಾದ ಡಾ. ಸಿ.ಕೆ. ಆನಂದ ತೀರ್ಥಾಚಾರ್ ಅವರ ಮಾತೃಶ್ರೀ ಲಕ್ಷ್ಮಿ ಬಾಯಿ ಅವರು ಮಂಗಳವಾರ ಬೆಳಿಗ್ಗೆ ವಿಧಿವಶರಾದರು.

ಓರ್ವ ಪುತ್ರ, ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿತು.

## ರಾಣೇಬೆನ್ನೂರು : ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಜ.4- ಗದಗ-ಹೊನ್ನಾಳಿ ರಸ್ತೆ ಅಗಲೀಕರಣದ ಪ್ರಯುಕ್ತ 33/11 ಕೆ.ವಿ ಗುಡುಗೂರು-ಮೈದೂರು ಉಪ-ಕೇಂದ್ರದಿಂದ ಹೊರಡುವ ಎಫ್-07 ಮಾಲತೇಶ ಎನ್.ಜೆ.ವೈ ಹಾಗೂ ಎಫ್-14 ಹುಲ್ಲತ್ತಿ ಎನ್.ಜೆ.ವೈ ಫೀಡರ್‌ನ ದೇವರಗುಡ್ಡ, ಶಿಡಗನಾಳ, ಚನ್ನಾಪುರ ತಾಂಡಾ, ಗುಡಗೂರು ತಾಂಡಾ, ಗುಡ್ಡದ ಆನ್ವೇರಿ, ಹುಲ್ಲತ್ತಿ, ಕಾಕೋಳ, ಕಾಕೋಳ ತಾಂಡಾ ಮತ್ತು ಕಜ್ಜರಿ ಗ್ರಾಮಗಳಲ್ಲಿ ನಾಡಿದ್ದು ದಿನಾಂಕ 6 ರಿಂದ 9 ರವರೆಗೆ ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ. ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.


**ಬೇಕಾಗಿದ್ದಾರೆ**
ಡ್ರೈನೀಡಲ್ ಥೆರಪಿ ಮಾಡಲು ಪಿ. ಯು.ಸಿ ಪಾಸ್/ಫೇಲ್ ಆದ ಹೆಣ್ಣುಮಗಳು ಬೇಕಾಗಿದ್ದಾರೆ.
7676750280

**ಕೆಲಸಗಾರರು ಬೇಕಾಗಿದ್ದಾರೆ**
ಏರ್‌ಟೆಲ್ ಕಂಪನಿಯಲ್ಲಿ ಕೆಲಸ ಮಾಡಲು ಪ್ರಮೋಟರ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ 10,000 + Incentive.
ಆಸಕ್ತಿಯುಳ್ಳವರು ಸಂಪರ್ಕಿಸಿ
87922 97357
88842 40439


## ಸುಭಾಷ್ಚಂದ್ರ ವಿಭೂತಿ ನಿಧನ



ದಾವಣಗೆರೆ ಡಿಸಿಎಂ ಟೌನ್‌ಶಿಪ್ ವಾಸಿ ಸುಭಾಷ್ಚಂದ್ರ ವಿಭೂತಿ (73) ಅವರು ದಿನಾಂಕ 4.01.2022ರ ಮಂಗಳವಾರ ಸಂಜೆ 6.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

## ನೇರ್ಲಿಗೆ ಗೌಡ್ರ ಮೇಘರಾಜ್ ನಿಧನ



ದಾವಣಗೆರೆ ತಾಲ್ಲೂಕು ನೇರ್ಲಿಗೆ ಗ್ರಾಮದ ವಾಸಿ ಬಿಜೆಪಿ ಮುಖಂಡರಾದ ಗೌಡ್ರ ಎನ್.ಜಿ. ಮೇಘರಾಜ್ (72) ಇವರು ದಿನಾಂಕ 4.1.2022ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.01.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನೇರ್ಲಿಗೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಸಾವಯವ ಆಹಾರದಿಂದ ಶಕ್ತಿ, ಚೈತನ್ಯ ವೃದ್ಧಿ

**(1ನೇ ಪುಟದಿಂದ)** ಆಹಾರ ಬಳಕೆಯಿಂದಾಗಿಯೇ ಶೇ.73ರಷ್ಟು ಜನರು ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂದರು. ನಿತ್ಯದ ಆಹಾರದಲ್ಲಿ ಸಿರಿಧಾನ್ಯಗ ಬಳಕೆಯಿಂದ ಅನೇಕ ರೋಗಗಳನ್ನು ತಡೆಯಬಹುದು ಎಂದರು.

ಇದೇ ವೇಳೆ ಅನುಸೂಯದೇವಿ ಟಿ.ಎಸ್. ಪಾಟೀಲ್ ಅವರಿಗೆ ಕದಳಿಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು ಅಲ್ಲಮಪ್ರಭು ಅವರ 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ' ವಚನವನ್ನು ಉದಾಹರಿಸುತ್ತಾ, ಜ್ಞಾನರತ್ನವೇ ನಿನ್ನ ಒಡೆಯ ಎಂದು ಅಲ್ಲಮಪ್ರಭು ಹೇಳಿದಂತೆ, ಪ್ರತಿಯೊಬ್ಬರೂ ತಮ್ಮ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದರು.

ದಾಯಾದಿಗಳು ಆಸ್ತಿಯಲ್ಲಿ ಪಾಲು ಕೇಳಬಹುದು. ಆದರೆ ನಾವು ಸಂಪಾದಿಸಿದ ಜ್ಞಾನದಲ್ಲಿ ಪಾಲು ಕೇಳಲು ಸಾಧ್ಯವಿಲ್ಲ. ಜ್ಞಾನ ಎಲ್ಲಾ ಆಸ್ತಿಗಳಿಗಿಂತಲೂ ಮಿಗಿಲಾದದ್ದು. ವನಚಗಳ ಮೂಲಕ 12ನೇ ಶತಮಾನದಲ್ಲಿ ಶಿವಶರಣರು ಕ್ರಾಂತಿ ಮಾಡಿದ್ದರು. ಅದೇ ರೀತಿ ಕದಳಿ ವೇದಿಕೆ ಸದಸ್ಯರಿಂದ 12ನೇ ಶತಮಾನ ಮತ್ತೆ ಮರುಕಳಿಸುವಂತಾಗಲಿ ಎಂದು ಆಶಿಸಿದರು.

### ನಯಾಗರ ಜಲಪಾತ ಮತ್ತು ರಾವಣ

ಒಮ್ಮೆ ಭಾರತದ ಮಹಿಳೆಯರು ಅಮೇರಿಕಾದ ನಯಾಗರ ಜಲಪಾತ ವೀಕ್ಷಣೆಗೆ ತೆರಳಿದ್ದು. ಅಲ್ಲಿನ ಗೈಡ್ ಜಲಪಾತದ ಸದ್ದು 6 ಕಿ.ಮೀ. ವರೆಗೆ ಕೇಳಿಸುತ್ತದೆ ಎಂದು ವಿವರಿಸುತ್ತಿದ್ದ. ಆದರೆ ಮಹಿಳಾ ತಂಡದಲ್ಲಿದ್ದ ಒಬ್ಬರು ನಮಗೆ ಜಲಪಾತದ ಸದ್ದೇ ಕೇಳುತ್ತಿಲ್ಲವಲ್ಲ ಎಂದಾಗ, ಮೊದಲು ನೀವು ಮಾತನಾಡುವುದನ್ನು ನಿಲ್ಲಿಸಿ. ನಂತರ ಸದ್ದು ಕೇಳಿಸುತ್ತದೆ ಎಂದ.

ಸೀತೆಯನ್ನು ಅಪಹರಿಸಿದ್ದ ರಾವಣ, ಅವಳ ಸ್ನೇಹ ಸಂಪಾದಿಸಲು ನಿತ್ಯವೂ ಒಂದೊಂದು ರೂಪದಲ್ಲಿ ಭೇಟಿಯಾಗಿ ವಿಫಲನಾಗಿದ್ದ. ಶ್ರೀರಾಮನ ರೂಪದಲ್ಲಿಯೇ ಒಮ್ಮೆ ಭೇಟಿಯಾಗಿ ನೋಡು ಎಂಬ ಸಲಹೆಗೆ ರಾವಣ ಹೀಗೆ ಉತ್ತರಿಸಿದ್ದ 'ನಾನು ಅದನ್ನೂ ಪ್ರಯತ್ನಿಸಿದ್ದೆ. ಆದರೆ ರಾಮನ ವೇಶ ಧರಿಸಿದ್ದಾಗ ನಾನು ರಾವಣನಾಗಲು ಸಾಧ್ಯವಾಗಲಿಲ್ಲ' ಎಂದ.

ಈ ಎರಡೂ ಪುಟ್ಟ ಕಥೆಗಳನ್ನು ಹೇಳಿದ್ದು ಈಶ್ವರನ್ ಪಿ. ತೀರ್ಥ ಅವರು. ಮಹಿಳೆಯರಿದ್ದ ಕಡೆ ಮಾತುಕತೆಗಳು ಇದ್ದೇ ಇರುತ್ತವೆ ಎನ್ನಲು ಒದು ಉದಾಹರಣೆಯಾದರೆ, ನಾವು ಎಂದಿಗೂ ಬೇರೆಯವರಾಗಲು ಸಾಧ್ಯವಿಲ್ಲ ಎಂಬುದಕ್ಕೆ ಮತ್ತೊಂದು ಉದಾಹರಣೆ.

ಇದೇ ಸಂದರ್ಭದಲ್ಲಿ ಕದಳಿ ವೇದಿಕೆ ಸದಸ್ಯೆಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಕದಳಿ ವೇದಿಕೆ ಜಿಲ್ಲಾಧ್ಯಕ್ಷೆ ಆಶಾ ಮಹಾಬಲೇಶ್ವರಗೌಡ್ರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಸಾವಿತ್ರಮ್ಮ ಉಪಸ್ಥಿತರಿದ್ದರು.

ಗಾಯತ್ರಿ ವಸ್ತ್ರದ್ ಹಾಗೂ ವಸಂತ ನಿರೂಪಿಸಿದರು. ವಿನೋದ ಅಜಗಣ್ಣನವರ್ ಸ್ವಾಗತಿಸಿದರು. ಮಮತಾ ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರಿಕಾ ಮಂಜುನಾಥ್ ದತ್ತಿ ದಾನಿಗಳನ್ನು ಪರಿಚಯಿಸಿದರೆ, ವಿಜಯ ಲಕ್ಷ್ಮಿ ಕದಳಿಶ್ರೀ ಪುರಸ್ಕೃತರನ್ನೂ, ವಾಣಿ ರಾಜ್ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಸೌಮ್ಯ ಸತೀಶ್, ಪೂರ್ಣಿಮ ಪ್ರಸನ್ನಕುಮಾರ್ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಟ್ಟರು. ವಿಜಯ ಚಂದ್ರಶೇಖರ್ ವಂದಿಸಿದರು.

## ಬುದ್ದಿಮಾಂದ್ಯ ಮಹಿಳೆ ಮೇಲೆ ಅತ್ಯಾಚಾರ ; ಬಂಧನ

ದಾವಣಗೆರೆ, ಜ.4- ಬುದ್ಧಿಮಾಂದ್ಯ ಮಹಿಳೆ ಮೇಲೆ ಇಬ್ಬರು ಅತ್ಯಾಚಾರವೆಸಗಿರುವ ಘಟನೆ ತಾಲ್ಲೂಕಿನ ಮ್ಯಾಸಗೊಂಡನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮ್ಯಾಸರಹಳ್ಳಿ ಪ್ರಭು ಮತ್ತು ಆತನ ಸ್ನೇಹಿತ ಕುಂದುವಾಡ ಕಿರಣ್ ಎಂಬುವವರೇ ಅತ್ಯಾಚಾರ ವೆಸಗಿರುವ ಆರೋಪಿಗಳು ಎನ್ನಲಾಗಿದೆ. ಈ ಇಬ್ಬರಲ್ಲಿ ಓರ್ವನನ್ನು ಪೊಲೀಸರು ಬಂಧಿಸಿದ್ದು, ಇನ್ನೋರ್ವ ನಾಪ ತ್ತೆಯಾಗಿದ್ದು, ಆತನ ಪತ್ತೆಗೆ ಶೋಧ ಕೈಗೊಂಡಿದ್ದಾರೆ. ಬುದ್ಧಿಮಾಂದ್ಯಳಾದ ಪತ್ನಿಯನ್ನು ಪತಿಯು ಆರೈಕೆ ಮಾಡಿಕೊಂಡು ಕೂಲಿ ಕೆಲಸದೊಂದಿಗೆ ಬದುಕನ್ನು ಕಟ್ಟಿಕೊಂಡಿದ್ದರು. ಮಧ್ಯಾಹ್ನವಾದರೂ ಮಹಿಳೆ ಮನೆಗೆ ಬಾರದಿದ್ದಾಗ ಪತಿ ಹಾಗೂ ಮನೆಯವರು ಹುಡುಕಾಟ ನಡೆಸಿದಾಗ ಆರೋಪಿಗಳಿಬ್ಬರು ಆಕೆಯನ್ನು ಕರೆದು ಕೊಂಡು ಹೋಗುತ್ತಿದ್ದಾರೆಂಬ ವಿಚಾರ ಗೊತ್ತಾಗಿದೆ. ನಂತರ ಹುಡುಕಾಟದ ವೇಳೆ ಆಕೆಯ ಚೀರಾಟ, ಅಳುವುದು ಕೇಳಿಸಿದಾಗ ಸ್ಥಳಕ್ಕೆ ಬಂದ ಸಂಬಂಧಿಕರು ಅರೆಪ್ರಜ್ಞಾವಸ್ಥೆಯಲ್ಲಿದ್ದ ಸಂತ್ರಸ್ಥೆಯನ್ನು ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಜ.4- ದಾವಣಗೆರೆ - ಅಮರಾವತಿ ರೈಲು ನಿಲ್ದಾಣಗಳ ಮಧ್ಯೆ 50 ವರ್ಷ ವಯಸ್ಸಿನ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದ್ದು, ವಾರಸುದಾರರು ಪತ್ತೆಯಾಗಿರುವುದಿಲ್ಲ. ಗೋಧಿ ಮೈಬಣ್ಣ, ಸದೃಢ ಮೈಕಟ್ಟು, ದುಂಡು ಮುಖ, ತಲೆಯಲ್ಲಿ 3 ಇಂಚು ಉದ್ದನೆಯ ಕಪ್ಪು ಕೂದಲು, ಬಲಗೈ ಮೊಣಕೈ ಕೆಳಗೆ ಜಂಗ್ಲಿ ಎಂಬ ಹಚ್ಚೆ ಗುರುತು ಮತ್ತು ಎಡಗೈ ಮೇಲೆ ಸ್ಟಾರ್ ಗುರುತು ಇರುವ ಈ ವ್ಯಕ್ತಿಯ ವಾರಸುದಾರರು ಇದ್ದಲ್ಲಿ ರೈಲ್ವೆ ಪೊಲೀಸ್ ಠಾಣೆ (08192-259643, 9480800469, 9480802123) ಯನ್ನು ಸಂಪರ್ಕಿಸಬಹುದು.

# ಶಾಲಾ ಮಕ್ಕಳಿಗಾಗಿ 5500 ಡೋಸ್ ಲಸಿಕೆ

ದಾವಣಗೆರೆ, ಜ.4- ತಾಲ್ಲೂಕಿನಲ್ಲಿ ಸರ್ಕಾರದ ಸೂಚನೆಯಂತೆ 15 ರಿಂದ 18 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಕೋವಿಡ್-19 ನಿರೋಧಕ ಲಸಿಕೆಯನ್ನು ಉಚಿತವಾಗಿ ನೀಡುವ ಕಾರ್ಯಕ್ರಮ ಆರಂಭವಾಗಿದ್ದು, ಜ. 05 ರಂದು ತಾಲ್ಲೂಕಿನ ಸರ್ಕಾರಿ ಮತ್ತು ಖಾಸಗಿ ಶಾಲಾ ಮಕ್ಕಳಿಗೆ ಲಸಿಕೆ ನೀಡುವ ಸಲುವಾಗಿ 5500 ಡೋಸ್ ಕೋವ್ಯಾಕ್ಸಿನ್ ಲಸಿಕೆ ಹಂಚಿಕೆ ಮಾಡಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

15 ರಿಂದ 18 ವರ್ಷದೊಳಗಿನ ಅಥವಾ 2007 ಮತ್ತು ಅದಕ್ಕೂ ಮುನ್ನ ಹುಟ್ಟಿದ ಎಲ್ಲಾ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆಯನ್ನು ಶಾಲೆ, ಕಾಲೇಜುಗಳಲ್ಲಿ ಅಥವಾ ಸಮೀಪದ ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ಲಸಿಕಾಕರಣ ಮಾಡಲಾಗುತ್ತಿದೆ. ಜ. 03 ರಿಂದ ಕಾರ್ಯಕ್ರಮ ಪ್ರಾರಂಭವಾಗಿದ್ದು, ಎರಡು ದಿನಗಳಲ್ಲಿ ತಾಲ್ಲೂಕಿನ ಸರ್ಕಾರಿ ಮತ್ತು ಖಾಸಗಿ ಶಾಲೆಗಳ 16 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದೆ. ಜ. 5 ರಂದು ಕೂಡ ಕಾರ್ಯಕ್ರಮ ಮುಂದುವರೆಯಲಿದ್ದು, ದಾವಣಗೆರೆ ನಗರ ಪ್ರದೇಶದ ಸರ್ಕಾರಿ ಮತ್ತು ಖಾಸಗಿ ಸೇರಿ 16 ಶಾಲೆಗಳ 2146 ಮಕ್ಕಳಿಗೆ, ಅಲ್ಲದೆ ತಾಲ್ಲೂಕಿನ ಎಲ್ಲ 25 ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಬರುವ ಶಾಲಾ ಮಕ್ಕಳಿಗೂ ಕೋವ್ಯಾಕ್ಸಿನ್ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗಿದೆ. ಜ. 05 ರಂದು ತಾಲ್ಲೂಕಿನಲ್ಲಿ ಒಟ್ಟು 5500 ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಆಯಾ ಶಾಲಾ, ಕಾಲೇಜು ಹಂತದಲ್ಲಿ ಮಕ್ಕಳು, ಪಾಲಕರು, ಪೋಷಕರಿಗೆ ಲಸಿಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

## ಮುರುಘಾಮಠದಲ್ಲಿ ಇಂದು ಸಾಮೂಹಿಕ ಕಲ್ಯಾಣ ಮಹೋತ್ಸವ

ಚಿತ್ರದುರ್ಗ : ನಗರದ ಬಸವಕೇಂದ್ರ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಚಿತ್ರದುರ್ಗ ಇವರ ಸಹಯೋಗದಲ್ಲಿ ಇಂದು ಬುಧವಾರ ಬೆಳಿಗ್ಗೆ 10.30 ಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ಸಾಮೂಹಿಕ ಕಲ್ಯಾಣ ಮಹೋತ್ಸವ ನಡೆಯಲಿದೆ. ಅಗಡಿ ಪ್ರಭುಸ್ವಾಮಿ ಮಠದ ಶ್ರೀ ಗುರುಸಿದ್ಧ ಸ್ವಾಮೀಜಿ, ಹೊಸದುರ್ಗ ಪುರಸಭೆ ಅಧ್ಯಕ್ಷ ಎಂ. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿರುವರು.

## ಕುರಿ ಮತ್ತು ಮೇಕೆ ಸಾಕಾಣಿಕೆ ಶಿಬಿರ

ದಾವಣಗೆರೆ, ಜ.4 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು 2 ದಿನದ ತರಬೇತಿ ನಾಡಿದ್ದು ದಿನಾಂಕ 6 ಮತ್ತು 7 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಡೆಯಲಿದೆ. ವಿವರಕ್ಕೆ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ ದಾವಣಗೆರೆ ದೂ.ಸಂ : 08192-233787 ಅನ್ನು ಸಂಪರ್ಕಿಸಬಹುದು.

## ಆರ್ಥಿಕ ಮೀಸಲಾತಿ ವಿಚಾರಣೆ ಇಂದು

ನವದೆಹಲಿ, ಜ. 4- ಆರ್ಥಿಕವಾಗಿ ಹಿಂದುಳಿದವರ ಮೀಸಲಾತಿ ಕುರಿತು ಬುಧವಾರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ. ನೀಟ್ - ಪಿ.ಜಿ. ಪ್ರವೇಶದ ಹಿನ್ನೆಲೆಯಲ್ಲಿ ತ್ವರಿತ ವಿಚಾರಣೆ ಗಾಗಿ ಕೇಂದ್ರ ಸರ್ಕಾರ ಮನವಿ ಮಾಡಿ ಕೊಂಡಿತ್ತು. ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಹಾಗೂ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ ಹಾಜ ರಾಗಿ ತ್ವರಿತ ವಿಚಾರಣೆಗೆ ಮನವಿ ಮಾಡಿಕೊಂಡಿದ್ದರು.

## ಸಂಘ, ಸಂಸ್ಥೆಗಳ ಧನಸಹಾಯಕ್ಕೆ ಅರ್ಜಿ

ದಾವಣಗೆರೆ, ಜ.4- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2021-22ನೇ ಸಾಲಿನ ಸಾಮಾನ್ಯ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಸಂಘ ಸಂಸ್ಥೆಗಳಿಗೆ ಧನಸಹಾಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ಜಾನಪದ, ನಾಟಕ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಸೃಜನಶೀಲ ಕಲಾ ಪ್ರಕಾರಗಳಲ್ಲಿ ನಿರಂತರ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಸಂಘ- ಸಂಸ್ಥೆಗಳಿಗೆ ಪ್ರೋತ್ಸಾಹ ರೂಪದಲ್ಲಿ ಧನಸಹಾಯ ನೀಡುತ್ತಿದೆ. ಈ 3 ಯೋಜನೆಗಳಿಗೆ ಧನ ಸಹಾಯ ನೀಡಲು ಸೇವಾಸಿಂಧು evasindhu.karnataka.gov.in ಮುಖಾಂತರ ಅರ್ಜಿಯನ್ನು ಇದೇ ದಿನಾಂಕ 8 ರವರೆಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 9380206704, 8088304855 ಅನ್ನು ಹಾಗೂ ಜಿಲ್ಲಾ ಯೋಜನಾ ವ್ಯವಸ್ಥಾಪಕರು ಸೇವಾಸಿಂಧು ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು.

# ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆಗೆ ಒತ್ತಾಯ




### ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ

ದಾವಣಗೆರೆ, ಜ.4- ಸೇವಾ ಭದ್ರತೆ ಸೇರಿದಂತೆ, ರಾಜ್ಯದ ಅತಿಥಿ ಉಪನ್ಯಾಸಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ (ಎಐಡಿಎಸ್‌ಓ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಿನ್ನೆ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಿಂದ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ, ದರ್ಶನ್, ಮಧುಸೂದನ್ ಹಾಗು ಇತರರ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪೂಜಾ ನಂದಿಹಳ್ಳಿ ಮಾತನಾಡಿ, ಈಚೆಗೆ ತೀರ್ಥಹಳ್ಳಿಯ ಸರ್ಕಾರಿ ಪದವಿ ಕಾಲೇಜು ಅತಿಥಿ ಬೋಧಕ ಹರ್ಷ ಶಾನುಭೋಗ ಕರುಣಾಜನಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡರೂ ಸರ್ಕಾರ ಮಾತ್ರ ಇನ್ನೂ ಎಚ್ಚೆತ್ತಿಲ್ಲ. ಅತ್ಯಂತ ಕಷ್ಟದ ಜೀವನ ನಡೆಸುತ್ತಿರುವ ಅತಿಥಿ ಉಪನ್ಯಾಸಕರ ವಿಚಾರದಲ್ಲಿ ಮಾನವೀಯತೆ ಮೆರೆಯಬೇಕಿದೆ ಎಂದು ತಿಳಿಸಿದರು.

ಉದ್ಯೋಗ ಭದ್ರತೆ, ಹಲವಾರು ತಿಂಗಳ ಸಂಬಳವೇ ಇಲ್ಲದೇ ಎಷ್ಟೋ ಉನ್ನತ ಪದವಿ ಪಡೆದವರು, ಎನ್‌ಇಟಿ ಉತ್ತೀರ್ಣರಾದವರು, ಡಾಕ್ಟರೇಟ್ ಪದವಿ ಪಡೆದವರು ಕಳೆದ 10-15 ವರ್ಷಗಳಿಂದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ದುಡಿಯುತ್ತಿದ್ದರೂ ಸರ್ಕಾರ ಅಂತಹವರಿಗೆ ಗೌರವಯುತ ಜೀವನ ನಡೆಸಲು ಕನಿಷ್ಠ ಭದ್ರತೆ, ವೇತನ ನೀಡುವಲ್ಲೂ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅತಿಥಿ ಬೋಧಕರು ತರಗತಿ ಬಹಿಷ್ಕರಿಸಿದರೆ ಶೈಕ್ಷಣಿಕ ಏರುಪೇರಾಗುತ್ತದೆಂಬುದನ್ನು ಸರ್ಕಾರ ಮರೆಯಬಾರದು. ತಕ್ಷಣವೇ ಅತಿಥಿ ಬೋಧಕರ ಸೇವೆ ಖಾಯಂಗೊಳಿಸಿ, ಜೀವನ ಭದ್ರತೆ ಕಲ್ಪಿಸಬೇಕು. ಮುಷ್ಕರದಿಂದಾದ ಶೈಕ್ಷಣಿಕ ಗೊಂದಲ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಮುಖಂಡರಾದ ಕಾವ್ಯ, ಪುಷ್ಪಾ, ಶಿವಕುಮಾರ, ಗಜೇಂದ್ರ, ದರ್ಶನ್, ಮಧುಸೂದನ್, ಶರತ್, ಯಶವಂತ, ಚರಣ್ ಶಿವಕುಮಾರ ಸೇರಿದಂತೆ ಇತರರು ಭಾಗವಹಿಸಿದ್ದರು.

## ಕವನ ಸ್ಪರ್ಧೆಯಲ್ಲಿ ಚಂದನಗೆ ಜಯ



ದಾವಣಗೆರೆ, ಜ. 4- ನಗರದ ರಾಘವೇಂದ್ರ ಹೈ-ಟೆಕ್ ಪಿಯು ಕಾಲೇಜಿನ ಕೆ. ಚಂದನ ರಾಜ್ಯ ಮಟ್ಟದ ಕವನ ರಚನಾ ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ.

ಶಿರಸಿಯ ಹಲೇಕಲ್ಲಿನ ಶ್ರೀದೇವಿ ಪದವಿ ಪೂರ್ವ ಕಾಲೇಜು ಹಾಗೂ ಅಂಕುರ ಸಾಹಿತ್ಯ ವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ಕವನ ರಚನಾ ಸ್ಪರ್ಧೆಯಲ್ಲಿ ನಗರದ ಯುವ ಸಾಹಿತ್ಯ ಪ್ರತಿಭೆ ರಾಘವೇಂದ್ರ ಹೈ-ಟೆಕ್ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕೆ. ಚಂದನ ಭಾಗವಹಿಸಿ ವಿಜೇತರಾಗಿದ್ದಾರೆ. ಅಂಕುರ ಸಾಹಿತ್ಯ ಸಂಕಲನಕ್ಕೆ ಇವರ ಕವನ ಆಯ್ಕೆಯಾಗಿದೆ.

## ಸಾವಿತ್ರಿಬಾಯಿ ಫುಲೆ ಆದರ್ಶಗಳನ್ನು ಸರ್ಕಾರ ರೂಢಿಸಿಕೊಳ್ಳಬೇಕು



### ಮುಷ್ಟೂರಿನ ಕಾರ್ಯಕ್ರಮದಲ್ಲಿ ತಾ.ಪಂ. ಮಾಜಿ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ

ರಾಣೇಬೆನ್ನೂರು, ಜ. 4- ದೇಶದಲ್ಲಿ ಬೇರೂರಿದ್ದ ಮೂಢನಂಬಿಕೆ, ಅಸ್ಪೃಶ್ಯತೆಯಂತಹ ಸಾಮಾಜಿಕ ಅನಿಷ್ಟಗಳನ್ನು ತೊಲಗಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಅವರ ಆದರ್ಶಗಳನ್ನು ಅಧಿಕಾರಕ್ಕೋಸ್ಕರ, ಜಾತಿ, ಜಾತಿ ಎಂದು ವಿಷಬೀಜ ಬಿತ್ತಿ ಅಸ್ಪೃಶ್ಯತೆಯನ್ನು 22ನೇ ಶತಮಾನ ದವರೆಗೂ ಜೀವಂತ ಇಟ್ಟಿರುವ ನಮ್ಮನ್ನಾಳುವ ಸರ್ಕಾರಗಳು ರೂಢಿಸಿಕೊಳ್ಳಬೇಕೆಂದು ತಾ.ಪಂ. ಮಾಜಿ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ ಸರ್ಕಾರವನ್ನು ಕುಟುಕಿದರು.

ಶಿಕ್ಷಕಿಯರ ಮೊದಲ ಗುರು ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನಾಚರಣೆಯನ್ನು ಮುಷ್ಟೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಗ್ರಾಮಸ್ಥರ ಪರವಾಗಿ ಎಸ್‌ಡಿಎಂಸಿಯವರ ಪರವಾಗಿ ಹಮ್ಮಿಕೊಂಡಿದ್ದ ಸತ್ಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಮುಖ್ಯೋಪಾಧ್ಯಾಯ ಎಂ. ರಾಜಶೇಖರ, ಶಿಕ್ಷಕಿ ಕೆ.ಟಿ. ರಾಧಾ, ಶಿಕ್ಷಕ ಬಸವರಾಜ ಬಿ. ಕಾಯಕದ, ನಾಗರಾಜ ಬಿಳಸೂರಮಠ ಅವರನ್ನು ಸತ್ಕರಿಸಲಾಯಿತು.

ಗ್ರಾಮದ ಮುಖಂಡರಾದ ಹರಿಹರಗೌಡ ಎಸ್. ಪಾಟೀಲ, ಎಸ್.ಡಿ. ಎಂಸಿ. ಅಧ್ಯಕ್ಷ ಯಲ್ಲಪ್ಪ ಆರ್. ಓಲೇಕಾರ, ಬಸವರಾಜ ಯಲ್ಲಕ್ಕನವರ, ಜಮಾಲ್ ಸಾಬ್ ಶೇಕ್‌ಸನದಿ, ಅಕ್ಬರ್ ಸಾಬ್ ಶೇಖಸಂದಿ, ಮಲಕಪ್ಪ ಲಿಂಗದಳ್ಳಿ, ಶಂಭನಗೌಡ ಪಾಟೀಲ, ಅಬ್ದುಲ್ ರೆಹಮಾನ್ ಶೇಕ್‌ಸನದಿ, ಭೀಮಪ್ಪ ಬಣಕಾರ, ರಾಮಪ್ಪ ಮುಷ್ಟೂರನಾಯ್ಕ, ಮಂಜಪ್ಪ ಮುಷ್ಟೂರನಾಯ್ಕ ಉಪಸ್ಥಿತರಿದ್ದರು.

ಅನುಷಾ ಪ್ರಾರ್ಥಿಸಿದರು. ಅಣ್ಣಪ್ಪ ಉದಗಟ್ಟಿ ಸ್ವಾಗತಿಸಿದರು. ಮಾರುತಿ ಮುಷ್ಟೂರ ನಾಯ್ಕ ವಂದಿಸಿದರು.

## 7 ರಂದು 'ಚಂದ್ರಬಿಂಬ' ಕೃತಿ ಲೋಕಾರ್ಪಣೆ

ದಾವಣಗೆರೆ, ಜ.4- ಕೀರ್ತಿಶೇಷ ಹೆಸ್ಕುಂದ ಚಂದ್ರಶೇಖರ ಅಡಿಗರ 'ಚಂದ್ರಬಿಂಬ' ಕೃತಿ ಲೋಕಾರ್ಪಣೆ ಕಾರ್ಯಕ್ರಮ ಇದೇ ದಿನಾಂಕ 7 ರಂದು ಶುಕ್ರವಾರ ಸಂಜೆ 4.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ ಎಂದು ಗ್ರಂಥ ಸಮಿತಿಯ ಗೌರವ ಸಂಪಾದಕರಾದ ಸಾಲಿಗ್ರಾಮ ಗಣೇಶ್‌ಶೆಣೈ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಾಹಿತಿ, ಸಂಶೋಧಕರೂ, ಅಷ್ಟಾವಧಾನಿಗಳಾದ ಮೈಸೂರಿನ ಡಾ.ಕಬ್ಬಿನಾಲೆ ವಸಂತ ಭಾರದ್ವಜ್ 'ಚಂದ್ರಬಿಂಬ' ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ, ಅಮೆರಿಕ ಆಚಾರ್ಯ ಫರ್‌ಫಾರ್ಮಿಂಗ್ ಆರ್ಟ್ಸ್ ಅಕಾಡೆಮಿಯ ನಿರ್ದೇಶಕಿ, ವಿದುಷಿ ಆಶಾ ಶ್ರೀನಿವಾಸ್ ಆಚಾರ್ಯ, ಗ್ರಂಥ ಸಮಿತಿಯ ಪ್ರಧಾನ ಸಂಪಾದಕರೂ, ಪ್ರಕಾಶಕರೂ ಆದ ಶ್ರೀಮತಿ ಚಂದ್ರಶೇಖರ ಅಡಿಗ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ದಿ. ಚಂದ್ರಶೇಖರ ಅಡಿಗ ಅವರ ಮೊಮ್ಮಕ್ಕಳೂ, ವಿದುಷಿ ಆಶಾ ಶ್ರೀನಿವಾಸ್ ಆಚಾರ್ಯ ಅವರ ಮಕ್ಕಳೂ, ಅಂತರರಾಷ್ಟ್ರೀಯ ಬಾಲ ಕಲಾವಿದರಾದ ಅದಿತಿ ಆಚಾರ್ಯ ಮತ್ತು ಅಭಿರಾಮ ಆಚಾರ್ಯ ಅವರ ವೈವಿಧ್ಯಮಯ ಭರತನಾಟ್ಯ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಹೇಳಿದರು.

ದಿ. ಅಡಿಗರು ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್, ಬ್ರಾಹ್ಮಣ ಸಮಾಜ ಸೇವಾ ಸಂಘ ಸೇರಿದಂತೆ ಹತ್ತು ಹಲವು ಸಂಘ-ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಕೆ.ಎನ್. ಸ್ವಾಮಿ, ಶ್ರೀಮತಿ ದಿ.ಚಂದ್ರಶೇಖರ ಅಡಿಗ, ಶ್ರೀಮತಿ ಆಶಾ ಶ್ರೀನಿವಾಸ್ ಆಚಾರ್ಯ, ಶ್ರೀಮತಿ ಅನ್ನಪೂರ್ಣ ಪಾಟೀಲ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ದೇಶ ಸೇವೆಯ ಅವಕಾಶ ಸಿಕ್ಕಿರುವುದು ಪುಣ್ಯ

### ಯಲವಟ್ಟಿ : ಗುರುಸಿದ್ಧಾಶ್ರಮದ ಕಾರ್ಯಕ್ರಮದಲ್ಲಿ ಸೈನಿಕ ಶಿವಕುಮಾರ್ ಸಂತಸ



ಮಲೇಬೆನ್ನೂರು, ಜ. 4- ದೇಶ ಸೇವೆ ಮಾಡುವ ಅವಕಾಶ ಸಿಕ್ಕಿರುವುದನ್ನು ಪುಣ್ಯ ಎಂದು ಭಾವಿಸಿದ್ದೇನೆ ಮತ್ತು ಸೇವೆಯ ಬಗ್ಗೆ ಹೆಮ್ಮೆ ಇದೆ ಎಂದು ಜಮ್ಮು-ಕಾಶ್ಮೀರದ ಲೇ-ಲಡಾಕ್‌ನ ಗಲ್ವಾನ್ ಪ್ರದೇಶದಲ್ಲಿ ಸೈನಿಕನಾಗಿರುವ ಯಲವಟ್ಟಿಯ ಹೆಚ್. ಶಿವಕುಮಾರ್ ಸಂತಸ ವ್ಯಕ್ತಪಡಿಸಿದರು.

ಯಲವಟ್ಟಿ ಗ್ರಾಮದ ಶ್ರೀ ಗುರುಸಿದ್ಧಾಶ್ರಮದಲ್ಲಿ ಅಮಾವಾಸ್ಯೆ ಪ್ರಯುಕ್ತ ಮೊನ್ನೆ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಗೌರವ, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕಳೆದ 26 ವರ್ಷಗಳಿಂದ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ನಮ್ಮ ದೇಶದ ರಕ್ಷಣಾ ವ್ಯವಸ್ಥೆ ಬಲಿಷ್ಠವಾಗಿದ್ದು, ನಮಗೆ ಸಂಪೂರ್ಣ ಸ್ವತಂತ್ರ ನೀಡಿದ್ದಾರೆ.

ಸೇನೆಯಲ್ಲಿ ಸೇವೆ ಸಲ್ಲಿಸುವ ಪ್ರತಿಯೊಬ್ಬರೂ ತಮ್ಮ ಜೀವಕ್ಕಿಂತ ದೇಶದ ರಕ್ಷಣೆ ಮುಖ್ಯ ಎಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದೇವೆ. ನಮಗೆ ನಮ್ಮ ಮನೆ, ಊರಿಗಿಂತ ದೇಶ ಮುಖ್ಯವಾಗಿದೆ. ಮನೆಯ ಒಳಗಡೆ ಮತ್ತು ಹೊರಗಡೆ ಪ್ರೋತ್ಸಾಹ ಸಿಗದಿದ್ದರೆ ದೇಶ ಸೇವೆ ಮಾಡಲು ಸಾಧ್ಯವಾಗುವುದಿಲ್ಲ.

ಈ ನಿಟ್ಟಿನಲ್ಲಿ ನಮ್ಮ ಮನೆಯವರು ಮತ್ತು ಊರಿನವರು, ಗುರುಗಳು ನೀಡುತ್ತಿರುವ ಪ್ರೀತಿ, ಪ್ರೋತ್ಸಾಹ ನನಗೆ ಸ್ಫೂರ್ತಿಯಾಗಿದ್ದು, ಸೇವೆಯಲ್ಲಿ ನಾನು ಸುಬೇದಾರ್ ಆಗಿ ಮುಂದಿನ ವರ್ಷ ನಿವೃತ್ತಿಯಾಗಲಿದ್ದೇನೆ. ನಿಮಗೆ ಸಾಧ್ಯವಾದರೆ ಇತರರಿಗೆ, ಊರಿಗೆ, ದೇಶಕ್ಕೆ ಒಳ್ಳೆಯದನ್ನು ಮಾಡಿ. ಇಲ್ಲದಿದ್ದರೆ ಸುಮ್ಮನೆ ಇದ್ದು ಬಿಡಿ. ಕೆಟ್ಟದ್ದನ್ನು ಮಾಡಬೇಡಿ, ಬಯಸಲೂ ಬೇಡಿ ಎಂದು ಸೈನಿಕ ಶಿವಕುಮಾರ್ ಮನವಿ ಮಾಡಿದರು.

ಹರಿಹರದ ಶ್ರೀ ಗುರು ಬ್ರಹ್ಮಾನಂದ ಸ್ವಾಮಿ ಮಠದ ಆಡಳಿತಾಧಿಕಾರಿ ವಿವೇಕಾನಂದ ಸ್ವಾಮಿ ಮಾತನಾಡಿ, ಸಿದ್ಧಾರೂಢರ ಸರಳತೆಗೆ ಕಬೀರಾನಂದ ದಾಸರೂ ಮನಸೋತಿದ್ದರು. ಭಕ್ತರ ಪಾದದ ಧೂಳನ್ನು ದೇವರೆಂದು ಭಾವಿಸಿದವರು ಜಗತ್ತಿನಲ್ಲಿ ಯಾರಾದರೂ ಇದ್ದರೆ ಅದು ಸಿದ್ಧಾರೂಢರಾಗಿದ್ದಾರೆ. ಅಂತಹವರ ನಾಮಸ್ಮರಣೆ ಮಾಡಿದರೆ ಸಾಕು ನಿಮ್ಮ ಸಂಕಷ್ಟ ದೂರವಾಗುತ್ತದೆ ಎಂದರು.

ರಾಜನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಹಾಗೂ ಮಾತೋಶ್ರೀ ಶ್ರೀಮತಿ ಗೀತಮ್ಮ ತಾಯಿ ಮಾತನಾಡಿ, ಸತ್ಸಂಗದಿಂದ ಸದ್ಗುಣಗಳು ಸಾಧ್ಯ. ನಾವು ಮಾಡುವ ಉತ್ತಮ ಕಾರ್ಯಗಳಿಂದ ಪುಣ್ಯ ಲಭಿಸುತ್ತದೆ. ಯಾವುದೇ ಸತ್ಸಂಗಕ್ಕಾಗಲೀ ನಿಮ್ಮ ಜೊತೆ ಇತರರನ್ನು ಕರೆದುಕೊಂಡು ಹೋಗಿ ಎಂದರು.

ದಾಗಿನಕಟ್ಟೆಯ ಶ್ರೀ ಗುರುಸಿದ್ಧಾಶ್ರಮದ ಶ್ರೀ ಕೃಷ್ಣಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿ ಅಂತಃಕರಣ ಶುದ್ಧಿ ಮಾಡಿಕೊಂಡಾಗ ಮಾತ್ರ ಬದುಕು ಬಂಗಾರವಾಗುತ್ತದೆ. ಈ ನಿಟ್ಟಿನಲ್ಲಿ ಅಧ್ಯಾತ್ಮಿಕ ಚಿಂತನೆ, ಕಾಯಕ ನಿಷ್ಠೆ ಮೈಗೂಡಿಸಿಕೊಳ್ಳಿ ಎಂದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ದೇಶ ಸೇವೆ ಮಾಡುವ ಸೈನಿಕ ಗ್ರಾಮದಲ್ಲಿರುವುದು ಗ್ರಾಮಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದರು.

ಗ್ರಾಮದ ಬಾವಿಕಟ್ಟೆ ಮಲ್ಲೇಶಪ್ಪ ಮತ್ತು ಕುಟುಂಬದವರು ಈ ದಿನದ ದಾಸೋಹ ದಾನಿಗಳಾಗಿದ್ದರು. ನಿವೃತ್ತ ಶಿಕ್ಷಕ ಜಿ. ಬಸಪ್ಪ, ಜಿ. ಮುರುಗೆಪ್ಪ ಗೌಡ್ರು, ಹೊಸಮನೆ ಮಲ್ಲಪ್ಪ, ಎ. ಸುರೇಶ್, ರಾಜಪ್ಪ, ನಿಟ್ಟೂರಿನ ಕೆ. ಸಂಜೀವ ಮೂರ್ತಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ರಂಗಪ್ಪ, ಹೊನ್ನಾಚಾರಿ, ಕುಂಬಳೂರಿನ ಕೆ. ಆಂಜನೇಯ, ಕುಬೇರಪ್ಪ, ಹೆಚ್.ಎಂ. ಸದಾಶಿವ, ಮಾಗೋಡು ರೇವಣಸಿದ್ದಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಪ್ರಗತಿಪರ ಕೃಷಿಕ ಹೊಳೆಸಿರಿಗೆರೆಯ ಕುಂದೂರು ಮಂಜಪ್ಪ ಅವರು ಸೈನಿಕ ಹೆಚ್. ಶಿವಕುಮಾರ್ ಕುರಿತು ಅಭಿನಂದನಾ ಪತ್ರ ಓದಿದರು. ಯಲವಟ್ಟಿ ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು. ಸಿರಿಗೆರೆಯ ಡಿ. ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.


## ಸಾರ್ವಜನಿಕ ಪ್ರಕಟಣೆ

ಹೆಚ್.ಸಿ. ಜಗದೀಶ್ ಬಿನ್ ಚಂದ್ರಪ್ಪ, ವಯಸ್ಸು ಸುಮಾರು 40 ವರ್ಷ, 1ನೇ ಮೇನ್, 2ನೇ ಕ್ರಾಸ್, ಜೈಭೀಮನಗರ, ಹರಿಹರ ಮೊ. 99869 40866 ವಾಸಿಯಾದ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ. ಮೇಲ್ಕಂಡ ನಾನು ಷೆಡ್ಯೂಲ್ ಸ್ವತ್ತಿನ ಮಾಲೀಕನಾಗಿರುತ್ತೇನೆ. ಸದರಿ ಷೆಡ್ಯೂಲ್ ಸ್ವತ್ತನ್ನು ಈ ಹಿಂದೆ ನಾನು ಶ್ರೀಮತಿ ಭಾಗಮ್ಮ @ ಭಾಗಿ ಬಾಯಿ ಕೋಂ ವೆಂಕಟೇಶ ಇವರಿಂದ ಶುದ್ಧ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಸ್ವತ್ತು ಶ್ರೀಮತಿ ಭಾಗಮ್ಮ @ ಭಾಗಿ ಬಾಯಿ ಇವರಿಗೆ ಹರಿಹರ ಪುರಸಭೆಯಿಂದ ದಿನಾಂಕ : 20.07.1994 ರಂದು ಹಕ್ಕು ಪತ್ರದ ಮೂಲಕ ಮಂಜೂರಾಗಿದ್ದು, ಸದರಿ ಮೂಲ ಹಕ್ಕುಪತ್ರವನ್ನು ನಾನು ದಿನಾಂಕ 15.11.2021 ರಂದು ಹರಿಹರ ನಗರದ ದೇವಸ್ಥಾನದ ರಸ್ತೆಯಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಲು ಅಂಗಡಿಗೆ ಹೋದಾಗ ಆಕಸ್ಮಿಕವಾಗಿ ಈ ಮೇಲೆ ಹೇಳಿದ ಅಸಲು ಹಕ್ಕುಪತ್ರವು ಕಳೆದು ಹೋಗಿರುತ್ತದೆ. ಸದರಿ ಅಸಲು ಹಕ್ಕುಪತ್ರವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನನ್ನನ್ನು ಸಂಪರ್ಕಿಸಿ ಅದನ್ನು ನನಗೆ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ. ಷೆಡ್ಯೂಲ್ : ಹರಿಹರ ಟೌನ್ ಜೈಭೀಮನಗರದಲ್ಲಿ ಬರುವ ಸೈಟ್ ನಂ. 430 ವಿಸ್ತೀರ್ಣ 20x30 ಅಡಿವುಳ್ಳ ವಾಸೋಪಯೋಗಿ ಮನೆಗೆ ಚಕ್ಕುಬಂದಿ ; ಪೂರ್ವ : ಸೈಟ್ ನಂ. 425, ಪಶ್ಚಿಮ : ರಸ್ತೆ, ಉತ್ತರ : ಸೈಟ್ ನಂ. 429, ದಕ್ಷಿಣ : ರಸ್ತೆ, ಈ ಮಧ್ಯೆ ಇರುವ ಸ್ವತ್ತು.

ಸಹಿ/- (ಹೆಚ್.ಸಿ. ಜಗದೀಶ್)
ಫೋ. : 99869 40866

## ಬೇಕಾಗಿದ್ದಾರೆ

ಮೆ॥ ಆರ್. ಹನುಮಂತಪ್ಪ ಅಂಡ್ ಸನ್‌ನ ಶ್ರೀ ಲಾಡ್ಜ್‌ನಲ್ಲಿ ಕಂಪ್ಯೂಟರ್ ಜ್ಞಾನ ಮತ್ತು ಅನುಭವ ಹೊಂದಿರುವವರು ಸೂಪರ್‌ವೈಸರ್ ಮತ್ತು ರೂಂ ಬಾಯ್ ಎರಡೂ ಹುದ್ದೆಗಳಿಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಿದ್ಧವಿರುವ ಕೆಲಸಗಾರರು ಬೇಕಾಗಿದ್ದಾರೆ.
ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

**ಮೆ॥ ಆರ್. ಹನುಮಂತಪ್ಪ ಅಂಡ್ ಸನ್**
ಹನುಮಂತಪ್ಪನವರ ಕಟ್ಟಡ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577 002.
ಫೋ. : 8192 258834, 258836

## ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ
Numero Astrologer & Palmistry



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ
ವಿಳಾಸ: ಪಂ. ಅರುಣ್ ಕುಮಾರ್ ಆಚಾರ್ಯ
ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ
ಮೊಬೈಲ್ : 94481 78626, 96068 18273
ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

(1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆ ಅನ್ವಯ ಸ್ಥಾಪಿತ)
ಶಾಖಾ ಕಛೇರಿ ನಂ. 1179/1, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
ಫೋ. : 08192 225049, 225660 email. : dvg@ksfc.co, website : www.ksfc.in

### ಕಛೇರಿ ವಾಹನ ಮಾರಾಟಕ್ಕಿದೆ

ಈ ಮೂಲಕ ಸಾರ್ವಜನಿಕರಿಗೆ ಜಾಹೀರಾತು ನೀಡುವುದೇನೆಂದರೆ ನಮ್ಮ ಶಾಖಾ ಕಛೇರಿಯ ವಾಹನ ಮಾರುತಿ ಒಮ್ನಿ ವ್ಯಾನ್ "ಎಲ್ಲಿ ಹೇಗಿದೆಯೋ ಹಾಗೆ" ಆಧಾರದಲ್ಲಿ ದಿನಾಂಕ : 14.1.2022 ರಂದು ಬೆಳಿಗ್ಗೆ 11.00 ಘಂಟೆಗೆ ಬಹಿರಂಗ ಹರಾಜು ಮಾಡಲಾಗುವುದು. ಇಚ್ಛೆಯುಳ್ಳವರು ದಿನಾಂಕ : 13.1.2022 ರಂದು ಮಧ್ಯಾಹ್ನ 1.30 ಘಂಟೆಯೊಳಗೆ ಮುಂಗಡ ಹಣವನ್ನು ಪಾವತಿಸಿ ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಈ ಕೆಳ ಸಹಿದಾರರನ್ನು ಸಂಪರ್ಕಿಸಲು ಕೋರಿದೆ.

| ವಾಹನದ ವಿವರ | ವಾಹನದ ಸಂಖ್ಯೆ | ಕಾಯ್ದಿರಿಸಿದ ಮೊತ್ತ | ಮುಂಗಡ ಹಣ/ಇಎಂಡಿ | ವಾಹನ ಪರಿವೀಕ್ಷಣೆಯ ಸ್ಥಳ ಮತ್ತು ದಿನಾಂಕ |
|---|---|---|---|---|
| 2011 ಮಾದರಿಯ ಮಾರುತಿ ಒಮ್ನಿ ವ್ಯಾನ್ (ಪೆಟ್ರೋಲ್) | ಕೆಎ-04-ಎಂಜೆ-8065 | ರೂ. 75,000.00 ಅನ್ವಯವಾಗುವ ಜಿಎಸ್‌ಟಿ ತೆರಿಗೆ ಪ್ರತ್ಯೇಕ | ರೂ. 10,000/- | ಕಛೇರಿ ಆವರಣದಲ್ಲಿ ದಿ. 11.01.2022ರ ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 1.00 ಘಂಟೆಯವರೆಗೆ. |

ಸೂಚನೆ : ಹರಾಜು ಪ್ರಕ್ರಿಯೆಯು ಹರಾಜಿನ ನಿಯಮ ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ. ಸಂಸ್ಥೆಯು ಹರಾಜು ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ.
ಸ್ಥಳ : ದಾವಣಗೆರೆ.
ದಿನಾಂಕ : 04.01.2022
ಸಹಿ/-ಶಾಖಾ ವ್ಯವಸ್ಥಾಪಕರು


# ಖಾಸಗಿ ಶಾಲೆ ಅವೈಜ್ಞಾನಿಕ ಮಾನದಂಡ ಕೈಬಿಡಲು ನಾರಾಯಣಸ್ವಾಮಿಗೆ ಮನವಿ




ದಾವಣಗೆರೆ, ಜ.4- ಖಾಸಗಿ ಶಾಲೆಗಳ ಮನ್ನಣೆ ಹಾಗೂ ನವೀಕರಣಕ್ಕೆ ಇರುವ ಅವೈಜ್ಞಾನಿಕ ಮಾನದಂಡಗಳನ್ನು ತೆಗೆದು ಹಾಕಿ ಈ ಮೊದಲಿನಂತೆ ಎಲ್ಲ ಖಾಸಗಿ ಶಾಲೆಗಳಿಗೂ ಆರ್.ಟಿ.ಇ. ವಿಸ್ತರಣೆ ಮಾಡುವಂತೆ ಸರ್ಕಾರದ ಗಮನ ಸೆಳೆಯಬೇಕು ಎಂದು ವಿಧಾನ ಪರಿಷತ್ ಸದಸ್ಯ ವೈ.ಎ.ನಾರಾಯಣ ಸ್ವಾಮಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು.

ಈ ನಿಯಮಗಳು ಜಾರಿಯಾದರೆ ರಾಜ್ಯದಲ್ಲಿ ಶೇ.95ರಷ್ಟು ಶಾಲೆಗಳನ್ನು ಮುಚ್ಚಬೇಕಾಗುತ್ತದೆ. ಕ್ಲಿಷ್ಟಕರವಾದ ಮಾನದಂಡಗಳನ್ನು ಸಡಿಲಿಕೆ ಮಾಡಬೇಕು ಎಂದು ಜಿಲ್ಲಾ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿ ವತಿಯಿಂದ ಶಾಸಕರಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಶಾಸಕ ನಾರಾಯಣಸ್ವಾಮಿ ಅವರು ಸ್ಥಳದಲ್ಲಿಯೇ ದಾವಣಗೆರೆಯ ಉತ್ತರ ಮತ್ತು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಕರೆಯಿಸಿಕೊಂಡು, ಖಾಸಗಿ ಶಾಲೆಗಳ ಮನ್ನಣೆ ವಿಷಯದಲ್ಲಿ ತೊಂದರೆ ಕೊಡಬಾರದು. ಈ ಬಗ್ಗೆ ರಾಜ್ಯಮಟ್ಟದಲ್ಲಿ ಸಮಿತಿ ರಚಿಸಲಾಗಿದೆ. ತಾವೂ ಸಹ ಸಮಿತಿ ಸದಸ್ಯರಿದ್ದು, ಮನ್ನಣೆ ನವೀಕರಣಕ್ಕೆ ಹೊಸ ಮಾನದಂಡಗಳನ್ನು ನೀಡಲಾಗುತ್ತದೆ. ಅಲ್ಲಿಯವರೆಗೂ ಖಾಸಗಿ ಶಾಲೆಗಳವರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.

ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ, ಕಾರ್ಯದರ್ಶಿ ಹೆಚ್.ಜಿ. ಪ್ರಕಾಶ್, ಉಪಾಧ್ಯಕ್ಷ ವೀರೇಶ್ ಬಿರಾದಾರ್, ಮಂಜುನಾಥ ಸ್ವಾಮಿ, ದಿನೇಶ್ ಗುರುಕುಲ, ಮಧುಕೇಶ್, ಶ್ರೀನಿವಾಸ್ ಹೂವಿನಮಡು ಮತ್ತು ತ್ರಿಶೂಲ್ ವಿದ್ಯಾಸಂಸ್ಥೆ ಮುಖ್ಯಸ್ಥರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


## ಹೃದಯಪೂರ್ವಕ ಅಭಿನಂದನೆಗಳು





ಮಹ್ಮದ್ ಖಲೀಲ್ ವಾರ್ಡ್ ನಂ. 1
ಸಮಯ್ಯ ಬಾನು ವಾರ್ಡ್ ನಂ. 2
ಕೆ.ಜಿ. ಲೋಕೇಶ್ ವಾರ್ಡ್ ನಂ. 7
ಭೋವಿ ಶಿವು ವಾರ್ಡ್ ನಂ. 9
ಮಂಜುಳಾ ಭೋವಿಕುಮಾರ್ ವಾರ್ಡ್ ನಂ. 10
ಮಹ್ಮದ್ ರಿಯಾಜ್ ವಾರ್ಡ್ ನಂ. 11
ನಫ್ಸಿಯಾ ಬಾನು ವಾರ್ಡ್ ನಂ. 12
ನಗೀನ ಬಾನು ವಾರ್ಡ್ ನಂ. 15
ಸಾಬೀರ್ ಅಲಿ ವಾರ್ಡ್ ನಂ. 16
ವಿಜಯಲಕ್ಷ್ಮಿ ಕೆ.ಪಿ. ಗಂಗಾಧರ್ ವಾರ್ಡ್ ನಂ. 19
ದಾದಾಪೀರ್ ವಾರ್ಡ್ ನಂ. 20
ಅಬ್ದುಲ್ ಮಜೀದ್ ವಾರ್ಡ್ ನಂ. 22

ದಿನಾಂಕ : 27.12.2021 ರಂದು ನಡೆದ ಮಲೇಬೆನ್ನೂರು ಪುರಸಭೆ ಚುನಾವಣೆಯಲ್ಲಿ 12 ಜನ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪುರಸಭೆಯಲ್ಲಿ ಅಧಿಕಾರದ ಚುಕ್ಕಾಣಿ ನೀಡಿದ ಮಲೇಬೆನ್ನೂರು ಪಟ್ಟಣದ ಸಮಸ್ತ ಜನತೆಗೆ ಮತ್ತು ಅಭ್ಯರ್ಥಿಗಳ ಆಯ್ಕೆಗೆ ಶ್ರಮಿಸಿದ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರಿಗೆ, ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು ಮತ್ತು ಪುರಸಭೆಗೆ ಆಯ್ಕೆಯಾದ ನೂತನ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು.



**ಡಿ.ಕೆ. ಸಿದ್ದನಗೌಡ**
ಜೀವ ವಿಮಾ ಪ್ರತಿನಿಧಿ, ಮಲೇಬೆನ್ನೂರು.


## ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

ಶ್ರೀ ಡಿ.ದೇವರಾಜ ಅರಸು ಬಡಾವಣೆ, ಎ ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ-577006

ಸಂ:ದಾಹನಪ್ರಾ:ಯೋವಿ:ಭೂಬ:2472/2021-22/2143 ದಿ:03-01-2022

### ಪ್ರಕಟಣೆ

ಶ್ರೀ ಆರ್.ಶಿವಯೋಗಿ ಗದಗೀಮಠ ಬಿನ್ ಲೇಟ್ ಹೆಚ್.ಜಿ.ರೇವಣಸಿದ್ದಯ್ಯ ದಾವಣಗೆರೆ, ಇವರು ತಮ್ಮ ಹಕ್ಕು ಸ್ವಾಧೀನದಲ್ಲಿರುವ ಹರಿಹರ ತಾಲ್ಲೂಕು ಹರಿಹರ ಗ್ರಾಮದ ರಿಸ.ನಂ. 44ರ ವಿಸ್ತೀರ್ಣ:10ಎ-19ಗುಂ ಜಮೀನನ್ನು ಸಾರ್ವಜನಿಕ/ಅರೆಸಾರ್ವಜನಿಕ ಹಾಗೂ ಉದ್ಯಾನವನ/ಬಯಲುಜಾಗ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಕೋರಿರುತ್ತಾರೆ. ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಮಹಾಯೋಜನೆ(ಪ-1)ರ ನಕ್ಷೆಯಲ್ಲಿ ಪ್ರಶ್ನಿತ ಜಮೀನನ ಪೈಕಿ ವಿಸ್ತೀರ್ಣ:04ಎ-15ಗುಂ ಪ್ರದೇಶವನ್ನು ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶಕ್ಕೆ ಹಾಗೂ ವಿಸ್ತೀರ್ಣ:02ಎ-06ಗುಂ ಪ್ರದೇಶವನ್ನು ಉದ್ಯಾನವನ/ಬಯಲುಜಾಗ ಉದ್ದೇಶಕ್ಕೆ ಕಾದಿರಿಸಲಾಗಿದೆ. ಪ್ರಶ್ನಿತ ಜಮೀನಿನ ಅಕ್ಕಪಕ್ಕದಲ್ಲಿ ಈಗಾಗಲೇ ವಸತಿ ಬಡಾವಣೆಗಳು ಅಭಿವೃದ್ಧಿ ಹೊಂದಿರುವುದರಿಂದ ವಸತಿ ಬಡಾವಣೆ ನಿರ್ಮಾಣಕ್ಕೆ ಯೋಗ್ಯವಾದ ಪ್ರದೇಶವಾಗಿರುವುದರಿಂದ ವಸತಿ ಬಡಾವಣೆ ನಿರ್ಮಿಸಿ ಸಾರ್ವಜನಿಕರಿಗೆ ಯೋಗ್ಯ ದರದಲ್ಲಿ ನಿವೇಶನ ಮಾರಾಟ ಮಾಡುವುದರಿಂದ ಸರ್ಕಾರಕ್ಕೆ ಅದಾಯ ಹೆಚ್ಚಾಗುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಸೆಕ್ಷನ್ 69(2) ರ ಪ್ರಕಾರ ಪ್ರಶ್ನಿತ ಜಮೀನಿನ ಪೈಕಿ ವಿಸ್ತೀರ್ಣ: 04ಎ-15ಗುಂ ಪ್ರದೇಶವನ್ನು ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಹಾಗೂ ವಿಸ್ತೀರ್ಣ:02ಎ-06ಗುಂ ಪ್ರದೇಶವನ್ನು ಉದ್ಯಾನವನ/ಬಯಲುಜಾಗ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಸಲಹೆ/ಆಕ್ಷೇಪಣೆಗಳಿದ್ದರೇ, ಈ ಪ್ರಕಟಣೆಯ ದಿನಾಂಕದಿಂದ 15 ದಿನದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಪ್ರಾಧಿಕಾರಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿವಸಗಳ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ ತಿಳಿಯಿರಿ.

ಸಹಿ/- ಆಯುಕ್ತರು
ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ವಾಸಾಸಂಇ/ದಾವಣಗೆರೆ/ಎಸ್‌ಎಸ್‌ಸಿ/605/2020-21

# ರಾಜ್ಯದ ಗಡಿ ರಸ್ತೆಗಳು ತಪಾಸಣಾ ಕೇಂದ್ರಗಳಾಗಿ ಪರಿವರ್ತನೆ : ಮುಖ್ಯಮಂತ್ರಿ ಬೊಮ್ಮಾಯಿ

ಬೆಂಗಳೂರು, ಜ. 4 - ಮಹಾರಾಷ್ಟ್ರ ಮತ್ತು ಕೇರಳ ಗಡಿ ಭಾಗದ ರಾಜ್ಯ ಸಂಪರ್ಕಿತ ಎಲ್ಲಾ ರಸ್ತೆಗಳನ್ನು ತಪಾಸಣಾ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ರಾಜ್ಯಗಳಲ್ಲಿ ಕೊರೊನಾ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಗಡಿ ಬಂದ್ ಮಾಡಲಾಗಿದೆ. ಒಂದು ಮತ್ತು ಎರಡನೇ ಅಲೆಗಳಲ್ಲಾದ ಅನುಭವದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಮುಖ್ಯ ರಸ್ತೆಗಳಲ್ಲದೆ, ಗಡಿ ಭಾಗದ ಹಳ್ಳಿಗಳ ಸಂಪರ್ಕಿತ ರಸ್ತೆಗಳಲ್ಲೂ ಬಂದ್ ಮಾಡಿ, ರಾಜ್ಯಕ್ಕೆ ಬರುವವರನ್ನು ತಪಾಸಣೆಗೆ ಒಳಪಡಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಈ ಗಡಿ ಭಾಗದ ಮುಖ್ಯರಸ್ತೆಯಲ್ಲಿ ಮಾತ್ರ ತಪಾಸಣೆ ನಡೆಯುತ್ತಿದೆ. ಉಳಿದಡೆ ಮಾಮೂಲಿಯಾಗಿ ಜನರು ಬಂದು ಹೋಗುತ್ತಿದ್ದಾರೆ. ಇದಕ್ಕೂ ಕಡಿವಾಣ ಹಾಕಲಾಗುವುದು. ಕೊರೊನಾದ ಹಿಂದಿನ ಅಲೆಗಳ ನಿರ್ವಹಣೆಯ ಅನುಭವ ಹೊಂದಿದ್ದು, ಆರೋಗ್ಯ ಮೂಲಸೌಕರ್ಯಗಳನ್ನು ವೃದ್ಧಿಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

> **ಆಯಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಹೊಣೆಗಾರಿಕೆಯನ್ನು ಆ ಠಾಣೆಗಳಿಗೆ ವಹಿಸಲಾಗುವುದು.**
> **- ಬಸವರಾಜ ಬೊಮ್ಮಾಯಿ, ಸಿಎಂ**

## ಉಕ್ಕಡಗಾತ್ರಿ : ನಾಳೆ ಮುಕ್ತಿಧಾಮ ನಾಮಫಲಕ ಅನಾವರಣ

ಮಲೇಬೆನ್ನೂರು, ಜ.4- ಉಕ್ಕಡಗಾತ್ರಿ ಗ್ರಾಮದ ಸಾರ್ವಜನಿಕ ರುದ್ರಭೂಮಿಗೆ ಬುದ್ಧ, ಬಸವ, ಅಂಬೇಡ್ಕರ್ ಮುಕ್ತಿಧಾಮ ಎಂದು ನಾಮಕರಣ ಮಾಡಲಾಗಿದ್ದು, ನಾಡಿದ್ದು ದಿನಾಂಕ 6ರ ಗುರುವಾರ ಮಧ್ಯಾಹ್ನ 12 ಗಂಟೆಗೆ ನಾಮಫಲಕ ಅನಾವರಣ ಹಾಗೂ ಸಸಿ ನೆಡುವ ಕಾರ್ಯಕ್ರಮವನ್ನು ನಾಗರಿಕ ಹಿತರಕ್ಷಣಾ ವೇದಿಕೆ ಮತ್ತು ಮಾನವ ಬಂಧುತ್ವ ವೇದಿಕೆ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಮಂಜು ದೊಡ್ಮನಿ ತಿಳಿಸಿದ್ದಾರೆ.

### ಮೇಕೆದಾಟು ಪಾದಯಾತ್ರೆ ಚಕಮಕಿ

# ಕೊರೊನಾ ಹೆಚ್ಚಾದರೆ ಕಾಂಗ್ರೆಸ್ಸಿಗರೇ ಕಾರಣ : ಸುಧಾಕರ್

> **ಮದುವೆ, ಸಮಾವೇಶಗಳಲ್ಲಿ ಕಾಲ ಕಳೆಯುತ್ತಿರುವ ಬಿಜೆಪಿ ನಾಯಕರ ಮೇಲೆ ಮೊಕದ್ದಮೆ ಹೂಡಿ : ಶಿವಕುಮಾರ್ ಸವಾಲು**

ಬೆಂಗಳೂರು, ಜ. 4 - ಮೇಕೆದಾಟು ಪಾದಯಾತ್ರೆಯ ವಿಷಯ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಡುವೆ ಭಾರೀ ವಾಗ್ಯುದ್ಧಕ್ಕೆ ಕಾರಣವಾಗಿದ್ದು, ರಾಜ್ಯದಲ್ಲಿ ಕೋವಿಡ್ ಹೆಚ್ಚಾದರೆ ಅದಕ್ಕೆ ಕಾಂಗ್ರೆಸ್ಸಿಗರೇ ಕಾರಣ ಎಂದು ಆರೋಗ್ಯ ಸಚಿವ ಸುಧಾಕರ್ ಹೇಳಿದರೆ ಮದುವೆ, ಸಮಾವೇಶಗಳಲ್ಲಿ ಕಾಲ ಕಳೆಯುತ್ತಿರುವ ಬಿಜೆಪಿ ನಾಯಕರ ಮೇಲೆ ಮೊದಲು ಮೊಕದ್ದಮೆ ಹೂಡಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಇಂದು ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಸುಧಾಕರ್ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂತಹ ಟೀಕೆ-ಪ್ರತಿ ಟೀಕೆ ಮಾಡುವುದರೊಂದಿಗೆ ಮೇಕೆದಾಟು ಪಾದಯಾತ್ರೆಯ ವಿಷಯ ಹಣಾಹಣಿಗೆ ಕಾರಣವಾಗಿದೆ.

ಮೇಕೆದಾಟು ಪಾದಯಾತ್ರೆ ಮಾಡುವುದು ಸರಿಯಲ್ಲ ಎಂದರಲ್ಲದೇ ಕೊರೊನಾ ಸಂಕಷ್ಟ ಶುರುವಾಗುತ್ತಿರುವಾಗ ಇಂತಹ ಪಾದಯಾತ್ರೆ ಮಾಡಿದರೆ ಕೋವಿಡ್ ಮತ್ತಷ್ಟು ಹೆಚ್ಚಳವಾಗುತ್ತದೆ. ಹೀಗಾಗಿ ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಸುಧಾಕರ್ ಹೇಳಿದ್ದಾರೆ.

ಒಂದು ವೇಳೆ ಇವರು ಪಾದಯಾತ್ರೆ ಮಾಡಿ ಕೊರೊನಾ ಹೆಚ್ಚಳವಾದರೆ ಅದಕ್ಕೆ ಇವರೇ ನೇರ ಹೊಣೆ ಎಂದು ಎಚ್ಚರಿಸಿದ ಅವರು, ಯಾವ ಕಾರಣಕ್ಕೂ ಇವತ್ತಿನ ಪರಿಸ್ಥಿತಿಯನ್ನು ನಿರ್ಲಕ್ಷಿಸಲಾಗದು ಎಂದು ವಿವರಿಸಿದರು.

ಇದಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು,ನಮ್ಮ ಮೇಲೆ ನೂರು ಮೊಕದ್ದಮೆ ಹೂಡಿದರೂ, ನೂರು ಬಾರಿ ಜೈಲಿಗೆ ಕಳಿಸಿದರೂ ಜನಹಿತಕ್ಕಾಗಿ ಮೇಕೆದಾಟು ಪಾದಯಾತ್ರೆ ಮಾಡುತ್ತೇವೆ ಎಂದರು. ಕೋವಿಡ್ ಅನ್ನು ಹೇಗೆ ಉತ್ಪ್ರೇಕ್ಷೆ ಮಾಡಲಾಗುತ್ತದೆ ಎಂಬುದನ್ನು ನೋಡಬೇಕೆಂದರೆ ವಿಮಾನ ನಿಲ್ದಾಣಕ್ಕೆ ಹೋಗಿ ನೋಡಿ. ಅಲ್ಲಿ ಪ್ರವಾಸಿಗರಿಂದ ವಿನಾಕಾರಣ ಮೂರೂವರೆ ಸಾವಿರ ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳ ತನಕ ಹಣವನ್ನು ದಬ್ಬಾಳಿಕೆಯಿಂದ ವಸೂಲು ಮಾಡಲಾಗುತ್ತಿದೆ ಎಂದು ಟೀಕಿಸಿದರು.

ಇವರು ಆಸ್ಪತ್ರೆಗಳು ಮತ್ತು ಹೋಟೆಲ್‌ಗಳ ಜತೆ ಒಳ ಒಪ್ಪಂದ ಮಾಡಿಕೊಂಡು ಕೋವಿಡ್ ಅನ್ನು ಹೇಗೆ ಉತ್ಪ್ರೇಕ್ಷೆ ಮಾಡುತ್ತಿದ್ದಾರೆ, ವಸೂಲು ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ ಎಂದು ವ್ಯಂಗ್ಯವಾಡಿದರು.

ಕೊರೊನಾ ಬಗ್ಗೆ ನಮಗೆ ಹೇಳುತ್ತಾರೆ, ನಾವು ಕಾರ್ಯಕ್ರಮ ಮಾಡಿದೆವು ಎಂದು ನಮಗೆ ಸಮನ್ಸ್ ನೀಡಿದ್ದಾರೆ. ಆದರೆ, ಮುಖ್ಯಮಂತ್ರಿಗಳು, ಮಂತ್ರಿಗಳು ಸೇರಿದಂತೆ ಬಿಜೆಪಿಯ ನಾಯಕರು ಮದುವೆ, ಸಮಾವೇಶಗಳಿಗೆ ತಿರುಗುತ್ತಲೇ ಇದ್ದಾರೆ. ಅವರ ಮೇಲೇಕೆ ಮೊಕದ್ದಮೆ ಹೂಡಿಲ್ಲ? ಎಂದು ಪ್ರಶ್ನಿಸಿದರು.

## ಆಸ್ಟ್ರೇಲಿಯಾದಲ್ಲಿ ದಾಖಲೆಯ ಸೋಂಕು, ಆಸ್ಪತ್ರೆಗೆ ದಾಖಲು

ಸಿಡ್ನಿ, ಜ. 4 - ಆಸ್ಟ್ರೇಲಿಯಾದಲ್ಲಿ ಹೊಸ ವೈರಸ್ ಪ್ರಕರಣಗಳು ಕಂಡು ಬರುವುದು ತೀವ್ರ ಏರಿಕೆಯಾಗಿದ್ದು, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಏರಿಕೆಯಾಗಿದೆ. ಆಸ್ಟ್ರೇಲಿಯಾದ ಅತಿ ಹೆಚ್ಚಿನ ಜನಸಂಖ್ಯೆಯ ರಾಜ್ಯವಾದ ನ್ಯೂ ಸೌತ್ ವೇಲ್ಸ್‌ನಲ್ಲಿ 23,131 ಪ್ರಕರಣಗಳು ವರದಿಯಾಗಿವೆ. ಅಲ್ಲಿನ ಆಸ್ಪತ್ರೆಗಳಲ್ಲಿ 1,344 ಜನ ದಾಖಲಾಗಿದ್ದಾರೆ. ಇದು ಸೆಪ್ಟೆಂಬರ್ ದಾಖಲೆಯನ್ನು ಮುರಿದಿದೆ.

ವಿಕ್ಟೋರಿಯಾ ರಾಜ್ಯದಲ್ಲಿ 14,020 ಪ್ರಕರಣಗಳು ಪತ್ತೆಯಾಗಿವೆ. ಇದು ಸೋಮವಾರದ ದಾಖಲೆಯಾದ 8,577 ಅನ್ನು ಮುರಿದಿದೆ. 516 ಜನರು ಆಸ್ಪತ್ರೆಯಲ್ಲಿ ಹಾಗೂ 108 ಜನರು ಐ.ಸಿ.ಯು.ನಲ್ಲಿದ್ದಾರೆ. ದೊಡ್ಡ ಸಂಖ್ಯೆಯ ಆರೋಗ್ಯ ಸಿಬ್ಬಂದಿ ಕೊರೊನಾ ಸೋಂಕಿಗೆ ಸಿಲುಕಿದ್ದು, ಕೆಲಸದಿಂದ ದೂರವಿದ್ದಾರೆ. ಇದರಿಂದಾಗಿ ಆರೋಗ್ಯ ಸೇವೆಗಳ ಮೇಲೆ ತೀವ್ರ ಒತ್ತಡ ಬಿದ್ದಿದೆ.

## ಮೂರನೇ ಅಲೆ ಆರಂಭದ ಸೂಚನೆ

**(1ನೇ ಪುಟದಿಂದ)** ಅಲೆಯೂ ದಕ್ಷಿಣ ಆಫ್ರಿಕಾಗೆ ಹೋಲುವ ರೀತಿ ಇರಬಹುದು ಎಂದವರು ಅಂದಾಜಿಸಿದ್ದಾರೆ. ಕಳೆದ 10 ದಿನಗಳಲ್ಲಿ ಕಂಡು ಬರುತ್ತಿರುವ ಪ್ರವೃತ್ತಿ ನೋಡಿದರೆ, ಭಾರತದಲ್ಲಿ ಶೀಘ್ರದಲ್ಲೇ 3ನೇ ಅಲೆ ಹೆಚ್ಚಿನ ಮಟ್ಟಕ್ಕೆ ತಲುಪಬಹುದು. ಆದರೆ, ಆತಂಕ ಪಡುವ ಅಗತ್ಯವಿಲ್ಲ ಎಂದರು.

# ಕುಡಿಯುವ ನೀರಿಗೆ ಒತ್ತಾಯಿಸಿ ಪುರಸಭೆ ಎದುರು ಧರಣಿ

ಮಲೇಬೆನ್ನೂರು, ಜ.4- ಪಟ್ಟಣದ 17ನೇ ವಾರ್ಡ್‌ನಲ್ಲಿ ಕೆಟ್ಟಿರುವ ಬೋರ್‌ವೆಲ್ ರಿಪೇರಿ ಮಾಡಿಸಿ ಕುಡಿಯುವ ನೀರು ಪೂರೈಸುವಂತೆ ಒತ್ತಾಯಿಸಿ ಮಂಗಳವಾರ ಪುರಸಭೆ ಮುಂಭಾಗ ವಾರ್ಡ್ ಸದಸ್ಯರಾದ ಶ್ರೀಮತಿ ಅಕ್ಕಮ್ಮ ಬಿ.ಸುರೇಶ್ ಅವರು ಜನರೊಂದಿಗೆ ಖಾಲಿ ಕೊಡಗಳೊಂದಿಗೆ ಪ್ರತಿಭಟನೆ ನಡೆಸಿದರು.

ಕಳೆದ ಅನೇಕ ದಿನಗಳಿಂದ ವಾರ್ಡ್‌ನಲ್ಲಿ ಬೋರ್‌ವೆಲ್‌ಗಳ ರಿಪೇರಿ ಇರುವುದರಿಂದ ನೀರಿನ ಸಮಸ್ಯೆ ಎದುರಾಗಿರುವ ಬಗ್ಗೆ ಪುರಸಭೆಗೆ ದೂರು ನೀಡಿದ್ದರೂ ಕ್ರಮಕೈಗೊಂಡಿಲ್ಲ ಎಂದು ಮಾಜಿ ಸದಸ್ಯ ಬಿ. ಸುರೇಶ್ ದೂರಿದರು.

ಈ ವೇಳೆ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಡೊಂಬರ್ ಅವರು, ಚುನಾವಣೆ ಕಾರಣದಿಂದಾಗಿ ಟೆಂಡರ್ ಕರೆದು ಮಾಡಬೇಕಾಗಿದ್ದ ಕೆಲಸಗಳು ವಿಳಂಬವಾಗಿ ಸಮಸ್ಯೆ ಆಗಿದೆ.

ತುರ್ತಾಗಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿ, ನೀರು ಪೂರೈಸುವ ಬಗ್ಗೆ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಇವತ್ತಿನಿಂದ ಕೆಲಸ ಪ್ರಾರಂಭಿಸಿದ್ದೇವೆ. ಒಂದೆರಡು ದಿನಗಳಲ್ಲಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಆಗಲಿದೆ.

ಪ್ರತಿಭಟನೆ ಕೈಬಿಟ್ಟು ನಮ್ಮೊಂದಿಗೆ ವಾರ್ಡಿಗೆ ಬನ್ನಿ, ಬೋರ್‌ವೆಲ್ ಎತ್ತಿಸಿ ರಿಪೇರಿ ಮಾಡಿಸೋಣ ಎಂದರೂ ಸುರೇಶ್ ಅವರು ಒಪ್ಪಲಿಲ್ಲ.

ಪಿಎಸ್ಐ ರವಿಕುಮಾರ್ ಅವರು ಸ್ಥಳಕ್ಕೆ ಆಗಮಿಸಿ, ಪ್ರತಿಭಟನೆ ಕೈಬಿಡಿ, ಕೆಲಸ ಮಾಡಿಸಿ ಕೊಡುವ ಜವಾಬ್ದಾರಿ ನಮ್ಮದು ಎಂದು ಹೇಳಿದರು.



### ಸಂಜೆ ವೇಳೆಗೆ ಸಮಸ್ಯೆ ಬಗೆಹರಿಸಿದ ಮುಖ್ಯಾಧಿಕಾರಿ

ಇದೇ ವೇಳೆ ಮುಖ್ಯಾಧಿಕಾರಿಗಳು 17, 18 ಮತ್ತು 19 ವಾರ್ಡ್‌ಗಳಲ್ಲಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲು ಹೊರಟಾಗ ಸದಸ್ಯೆ ಅಕ್ಕಮ್ಮ ಸುರೇಶ್ ಅವರು ಪ್ರತಿಭಟನೆ ಕೈ ಬಿಟ್ಟು ಅವರೊಂದಿಗೆ ವಾರ್ಡಿಗೆ ತೆರಳಿದರು. ಸಂಜೆ ಹೊತ್ತಿಗೆ ಒಂದು ಬೋರ್‌ವೆಲ್ ಸರಿಯಾಗಿ ನೀರು ಪೂರೈಕೆ ಆರಂಭವಾಗಿದೆ ಎಂದು ಅಕ್ಕಮ್ಮ ಸುರೇಶ್ 'ಜನತಾವಾಣಿ'ಗೆ ತಿಳಿಸಿದರು.

ಜೊತೆಗೆ 18, 19 ಮತ್ತು 20ನೇ ವಾರ್ಡ್‌ನಲ್ಲೂ ಬೋರ್‌ವೆಲ್‌ಗಳ ರಿಪೇರಿ ಆಗಿ ನೀರು ಸರಬರಾಜು ಆಗುತ್ತಿದೆ ಎಂದು ಮುಖ್ಯಾಧಿಕಾರಿ ಡೊಂಬರ್ ತಿಳಿಸಿದರು.

## ರಾಣೇಬೆನ್ನೂರು : ಶಾಲಾ-ಕಾಲೇಜು ಬಂದ್ ಮುಂದೂಡಿಕೆ

ರಾಣೇಬೆನ್ನೂರು ,ಜ.4- ಜನವರಿ 6 ರಂದು ನೀಡಲಾಗಿದ್ದ ಶಾಲಾ-ಕಾಲೇಜ್ ಬಂದ್ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು. ಕೆ.ಪಿ.ಸಿ.ಸಿ ಶಿಕ್ಷಕರ ಹಾಗೂ ಪದವೀಧರ ಘಟಕದ ರಾಜ್ಯ ಅಧ್ಯಕ್ಷ ಡಾ. ಆರ್. ಎಂ. ಕುಬೇರಪ್ಪ ತಿಳಿಸಿದ್ದಾರೆ. ಮುಖ್ಯಮಂತ್ರಿಗಳೇ ಶಿಕ್ಷಣ ಇಲಾಖೆಯ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಮನ್ನಣೆ ನವೀಕರಣಕ್ಕೆ ವಿಧಿಸಿರುವ ಕಠಿಣ ಷರತ್ತುಗಳನ್ನು ಸಡಿಲಗೊಳಿಸಲು ಸೂಚನೆ ನೀಡಿರುವ ಹಿನ್ನಲೆಯಲ್ಲಿ ಬಂದ್ ಮುಂದೂಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ನಗರದಲ್ಲಿಂದು ರಕ್ತದಾನ ಶಿಬಿರ

ದಾವಣಗೆರೆ ನಗರದ ದವನ್ ಮತ್ತು ನೂತನ ಕಾಲೇಜುಗಳ ವತಿಯಿಂದ ಸಿ.ಜಿ. ಆಸ್ಪತ್ರೆಯ ಸಹಯೋಗದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ನೂತನ ಕಾಲೇಜಿನ ಆವರಣದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಈಗಾಗಲೇ 100 ವಿದ್ಯಾರ್ಥಿಗಳು ರಕ್ತದಾನ ಮಾಡಲು ಹೆಸರು ನೋಂದಾಯಿಸಿಕೊಂಡಿದ್ದು, ಕಾರ್ಯಕ್ರಮದಲ್ಲಿ ಪ್ರಾಚಾರ್ಯರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಯವರು, ಸಿ.ಜಿ. ಆಸ್ಪತ್ರೆ ವೈದ್ಯಾಧಿಕಾರಿಗಳು ಭಾಗವಹಿಸಲಿದ್ದಾರೆ.

# ಎವಿಕೆ ರಸ್ತೆಯಲ್ಲಿ ಬೀದಿದೀಪ ನಿರ್ವಹಣೆ ಮಾಡದ ಪಾಲಿಕೆ ವಿರುದ್ಧ ಪ್ರತಿಭಟನೆ




ದಾವಣಗೆರೆ, ಜ. 4- ನಗರದ ಎವಿಕೆ ರಸ್ತೆಯಲ್ಲಿ ಬೀದಿ ದೀಪ ನಿರ್ವಹಣೆ ಮಾಡದ ಮಹಾನಗರ ಪಾಲಿಕೆ ವಿರುದ್ಧ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಹಾಗೂ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ ನೇತೃತ್ವದಲ್ಲಿ ರಸ್ತೆಯಲ್ಲಿರುವ ವರ್ತಕರು ಮಳಿಗೆಯ ಮಾಲೀಕರು ಪಿಜೆ ಹೋಟೆಲ್‌ನಿಂದ ಚೇತನಾ ಹೋಟೆಲ್ ವರೆಗೂ ಪಾದಯಾತ್ರೆ ಮೂಲಕ ಕ್ಯಾಂಡಲ್ ಹಚ್ಚಿ ಕೊಂಡು ಪ್ರತಿಭಟನೆ ನಡೆಸಿದರು.

ಈ ಹಿಂದೆ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಶಾಮನೂರು ಶಿವಶಂಕರಪ್ಪ ನವರು ಎವಿಕೆ ರಸ್ತೆಗೆ ಸುಂದರವಾದ ಬೀದಿ ದೀಪಗಳನ್ನು ಅಳವಡಿಸಿದ್ದರು. ಆದರೆ ಕಳೆದ ಮೂರು ತಿಂಗಳಿನಿಂದ ಅವು ಕಾರ್ಯ ನಿರ್ವಹಿಸುತ್ತಿಲ್ಲ. ಪಾಲಿಕೆ ಸದಸ್ಯ, ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್ ನಿರ್ಲಕ್ಷ್ಯತನದಿಂದ ರಾತ್ರಿ ವೇಳೆಯಲ್ಲಿ ಕತ್ತಲೆ ತುಂಬಿರುವ ವಾತಾವರಣ ತುಂಬಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಎವಿಕೆ ರಸ್ತೆಯ ವರ್ತಕರಾದ ಇಂದೂಧರ್ ನಿಶಾನಿಮಠ, ಮಂಜುನಾಥ್, ಮುರಾರಿರಾವ್, ಪಿಜೆ ಬಡಾವಣೆ ವಾರ್ಡ್ ಮುಖಂಡರಾದ ರೇವಣಪ್ಪ, ಪಂಚಪ್ಪ, ತೇರದಾಳ್ ಪರಸಪ್ಪ, ಬುನಿಯನ್ ಭಾಸ್ಕರ್, ಕೇರಂ ಗಣೇಶ್, ಯತಿರಾಜ ಮಠದ್, ಬಸವರಾಜ್, ತಿಮ್ಮೇಶ್, ಅಂತೂಗೋಪಾಲ್, ಮಾಂತೇಶ, ರವಿ, ಎಸ್.ಸಿದ್ದೇಶ್, ಯುವರಾಜ್ ಮುಂತಾದವರಿದ್ದರು.

## ನಗರದಲ್ಲಿ ಇಂದು ನಿವೃತ್ತ ಯೋಧರಿಗೆ ಸ್ವಾಗತ





ಭಾರತೀಯ ಸೈನ್ಯದಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ನಿವೃತ್ತರಾಗಿರುವ ಬಿ.ಎಸ್. ಎಫ್. ಯೋಧರಾದ ನಗರದ ನಾಗರಾಜ ಶೆಟ್ಟಿ ಮತ್ತು ಅರಸಿಕೆರೆಯ ರಾಘವೇಂದ್ರ ಅವರುಗಳು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 9 ಗಂಟೆಗೆ ನಗರದ ರೈಲ್ವೇ ನಿಲ್ದಾಣದಲ್ಲಿ ಯೋಧರನ್ನು ಅದ್ಧೂರಿಯಾಗಿ ಸ್ವಾಗತಿಸುವ ಕಾರ್ಯಕ್ರಮವನ್ನು ಟೀಮ್ ಯೋಧ ನಮನ, ಜಿಲ್ಲಾ ಪ್ಯಾರಾ ಮಿಲಿಟರಿ ಯೋಧರ ಸಂಘ, ಜಿಲ್ಲಾ ಮಾಜಿ ಸೈನಿಕರ ಸಂಘ ಸೇರಿದಂತೆ ವಿವಿಧ ದೇಶಾಭಿಮಾನಿ ಸಂಘಟನೆಗಳು ಹಮ್ಮಿಕೊಂಡಿವೆ.


## ಫ್ರಾನ್ಸ್‌ನಲ್ಲಿ ಕೊರೊನಾದ ಹೊಸ ರೂಪಾಂತರಿ ಐ.ಹೆಚ್.ಯು. ಪತ್ತೆ

ನವದೆಹಲಿ, ಜ. 4 - ಫ್ರಾನ್ಸ್ ವಿಜ್ಞಾನಿಗಳು ಕೊರೊನಾದ ಹೊಸ ರೂಪಾಂತರಿಯನ್ನು ಪತ್ತೆ ಮಾಡಿದ್ದಾರೆ. ಇದು ಓಮಿಕ್ರಾನ್‌ಗಿಂತ ಹೆಚ್ಚು ಬದಲಾವಣೆ ಕಂಡಿದೆ. ಕ್ಯಾಮರೂನ್‌ನಲ್ಲಿ ಈ ರೂಪಾಂತರಿ ಹುಟ್ಟಿಕೊಂಡಿರಬಹುದು ಎಂದು ಶಂಕಿಸಲಾಗುತ್ತಿದೆ. ಹೊಸ ರೂಪಾಂತರಿಯ ಕನಿಷ್ಠ 12 ಪ್ರಕರಣಗಳು ಮರ್ಸಿಲಿಸ್ ಬಳಿ ಪತ್ತೆಯಾಗಿವೆ. ಆಫ್ರಿಕಾದ ಕ್ಯಾಮರೂನ್ ದೇಶಕ್ಕೆ ಭೇಟಿ ಮಾಡಿದವರಿಂದ ಸೋಂಕು ಬಂದಿರಬಹುದು ಎಂದು ಶಂಕಿಸಲಾಗಿದೆ.

ಹೊಸ ರೂಪಾಂತರಿಗೆ ಐ.ಹೆಚ್.ಯು. ಎಂಬ ಹೆಸರಿಡಲಾಗಿದೆ. ಮೆಡ್‌ಆರ್‌ಕ್ಸಿವ್ ಪತ್ರಿಕೆಯಲ್ಲಿ ಈ ಬಗ್ಗೆ ವಿವರಗಳನ್ನು ಪ್ರಕಟಿಸಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಸೋಂಕು ರೋಗ ಪರಿಣಿತ ಎರಿಕ್ ಫೀಗಲ್ - ಡಿಂಗ್, ಹೊಸ ರೂಪಾಂತರಿ ಬಂದಾಕ್ಷಣ ಹೆಚ್ಚು ಅಪಾಯಕಾರಿ ಎಂದರ್ಥವಲ್ಲ. ಮೂಲ ವೈರಸ್‌ಗಿಂತ ಸಾಕಷ್ಟು ಬದಲಾವಣೆ ಕಂಡಿರುವುದರ ಜೊತೆಗೆ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ ಎಂದು ತಿಳಿಸಿದ್ದಾರೆ.

## ಕೇಜ್ರಿವಾಲ್‌ಗೆ ಕೊರೊನಾ



ನವ ದೆಹಲಿ, ಜ. 4- ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರಿಗೆ ಕೊರೊನಾ ಸೋಂಕು ಬಂದಿದೆ. ಅವರು ಮನೆಯಲ್ಲಿ ಪ್ರತ್ಯೇಕವಾಗಿದ್ದಾರೆ. ಕಳೆದ ಕೆಲ ದಿನಗಳಲ್ಲಿ ತಮ್ಮ ಸಂಪರ್ಕಕ್ಕೆ ಬಂದವರು ಟೆಸ್ಟ್ ಮಾಡಿಸಿಕೊಳ್ಳುವಂತೆ ಅವರು ಕರೆ ನೀಡಿದ್ದಾರೆ. ಕೇಜ್ರಿವಾಲ್ ಸೋಂಕಿಗೆ ಸಿಲುಕಿರುವುದು ಇದೇ ಮೊದಲು. ಕಳೆದ ವರ್ಷ ಏಪ್ರಿಲ್‌ನಲ್ಲಿ ಅವರ ಪತ್ನಿ ಸುನಿತಾ ಕೇಜ್ರಿವಾಲ್ ಅವರಿಗೆ ಕೊರೊನಾ ಬಂದಿತ್ತು.

## ವಿದ್ಯುತ್ ವ್ಯತ್ಯಯ

ಜಗಳೂರು ಉಪವಿಭಾಗ ವ್ಯಾಪ್ತಿಯ 66/11 ಕೆವಿ ಉಜ್ಜಿನಿ ವಿದ್ಯುತ್ ಮಾರ್ಗದ ನಿರ್ಮಾಣ ಕಾಮಗಾರಿ ನಿರ್ವಹಿಸಬೇಕಾಗಿರುವುದರಿಂದ ಕಾಮಗಾರಿಗೆ ಸಂಬಂಧಿಸಿದಂತೆ ಸೊಕ್ಕೆ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳು ಮತ್ತು ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಇಂದು ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ನಾಗರಿಕರು ಸಹಕರಿಸಲು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ಸೋಲನ್ನು ಸವಾಲಾಗಿ ಸ್ವೀಕರಿಸಿದ್ದೇನೆ





### ಜಗಳೂರಿನಲ್ಲಿ ಸೋಮಶೇಖರ್

ಜಗಳೂರು, ಡಿ. 4- ಸೋಲು ಗೆಲುವು ಸಹಜ. ನಾನು ಸೋಲನ್ನು ಸವಾಲನ್ನಾಗಿ ಸ್ವೀಕರಿಸಿದ್ದೇನೆ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಪಕ್ಷದ ಪರಾಜಿತ ಅಭ್ಯರ್ಥಿ ಎಂ.ಸೋಮಶೇಖರ್ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಛೇರಿಗೆ ಆಗಮಿಸಿ ಸ್ಥಳಿಯ ಸಂಸ್ಥೆಗಳ ವಿಧಾನ ಪರಿಷತ್ ಚುನಾವಣೆಯಲ್ಲಿ ಮತದಾನ ಮಾಡಿದ ಮತದಾರರಿಗೆ ಹಾಗೂ ಕಾರ್ಯಕರ್ತರು ಮುಖಂಡರುಗಳಿಗೆ ಕೃತಜ್ಞತೆ ಸಲ್ಲಿಸಿ ಅವರು ಮಾತನಾಡಿದರು.

ಮುಂದಿನ ಚುನಾವಣೆಗಳ ಆಸೆ ಆಕಾಂಕ್ಷಿ ಹೊತ್ತು ಆಗಮಿಸಿಲ್ಲ. ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಮತದಾರರಿಗೆ ಹಾಗೂ ಕಾರ್ಯಕರ್ತರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಆಗಮಿಸಿದ್ದೇನೆ. ಗೆಲುವು ಸಾಧಿಸಿದವರು ಇಂದಿಗೂ ಹಿಂತಿರುಗಿ ಕ್ಷೇತ್ರಕ್ಕೆ ಬಂದಿಲ್ಲ. ನಾನು ಸೋತರೂ ಕ್ಷೇತ್ರದಲ್ಲಿ ಸದಾ ಪಕ್ಷದ ಕಾರ್ಯಕ್ರಮಗಳಲ್ಲಿ ತಮ್ಮ ಜೊತೆಗಿದ್ದು ಬೆಂಬಲಿಸುವೆ ಎಂದರು.

ಚಿತ್ರದುರ್ಗ ಕ್ಷೇತ್ರದ ಮಾಜಿ ಸಂಸದ ಚಂದ್ರಪ್ಪ ಮಾತನಾಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಅಲೆ ಇಳಿಮುಖವಾಗುತ್ತಿದೆ. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಖಚಿತ. ಇತ್ತೀಚೆಗೆ ನಡೆದ ನಗರ ಸ್ಥಳಿಯ ಸಂಸ್ಥೆಗಳ ಚುನಾವಣೆ ಫಲಿತಾಂಶವೇ ಇದಕ್ಕೆ ಸಾಕ್ಷಿ. ಸೋಮಶೇಖರ್ ಅವರು ಸೋಲು ಅನುಭವಿಸಿದ್ದರೂ ಸದಾ ತಮ್ಮ ಧ್ವನಿಯಾಗಿರುತ್ತಾರೆ ಎಂದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ಸೋಲಿನ ನಂತರವೂ ಸ್ವಯಂ ಪ್ರೇರಿತವಾಗಿ ತಾಲ್ಲೂಕಿಗೆ ಆಗಮಿಸಿ ಮತ ನೀಡಿದವರಿಗೆ ಕೃತಜ್ಞತೆ ಸಲ್ಲಿಸುತ್ತಿರುವುದು ಅವರ ವ್ಯಕ್ತಿತ್ವ ಮತ್ತು ಪಕ್ಷದ ಕಾಳಜಿಯನ್ನು ಬಿಂಬಿಸುತ್ತದೆ ಎಂದರು.

ಕಾಂಗ್ರೆಸ್ ಪಕ್ಷದ ಆನ್ ಲೈನ್ ಸದಸ್ಯತ್ವ ನೋಂದಣಿ ಅಭಿಯಾನ ಶೀಘ್ರ ಪೂರ್ಣಗೊಳಿಸಲು ನೋಂದಣಿದಾರರಿಗೆ ಸಲಹೆ ನೀಡಿದರು.

ಸಂದರ್ಭದಲ್ಲಿ ಕೆಪಿಸಿಸಿ ಎಸ್ಟಿ ಘಟಕದ ಕೆ.ಪಿ. ಪಾಲಯ್ಯ, ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಕಮ್ಮತ್ತಹಳ್ಳಿ ಮಂಜುನಾಥ್, ಮುಖಂಡರಾದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಸಿ.ತಿಪ್ಪೇಸ್ವಾಮಿ, ತಿಮ್ಮಾರೆಡ್ಡಿ, ಯು.ಜಿ.ಶಿವಕುಮಾರ್, ಪ.ಪಂ ಸದಸ್ಯರಾದ ರವಿಕುಮಾರ್, ಶಕೀಲ್ ಅಹಮ್ಮದ್, ರಮೇಶ್ ರೆಡ್ಡಿ ಮುಂತಾದವರು ಇದ್ದರು.

## ಎಎಐ ಆಸ್ತಿ ವಶ ತಡೆಯಲು ಕ್ರಮ

ನವದೆಹಲಿ ಜ. 4 - ಐ.ಎ.ಟಿ.ಎ. ಬಳಿ ತಾನು ಹೊಂದಿರುವ 30 ದಶಲಕ್ಷ ಡಾಲರ್‌ಗಳನ್ನು ವಶಪಡಿಸಿಕೊಳ್ಳುವಂತೆ ದೇವಸ್ ಮಲ್ಟಿಮೀಡಿಯಾಗೆ ಕೆನಡಾ ನ್ಯಾಯಾಲಯ ಆದೇಶಿಸಿರುವುದರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (ಎ.ಎ.ಐ.) ತಿಳಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಎ.ಎ.ಐ. ವಕ್ತಾರರು, ಕೆನಡಾದ ಕ್ಯುಬೆಕ್ ನ್ಯಾಯಾಲಯದ ಆದೇಶ ಇನ್ನೂ ತಲುಪಿಲ್ಲ. ಆದರೆ, ತನ್ನ ಹಣ ವರ್ಗಾಯಿಸುವುದನ್ನು ತಡೆಯುವಂತೆ ಎ.ಐ.ಟಿ.ಎ.ಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದ್ದಾರೆ. ಐ.ಎ.ಟಿ.ಎ. ಬಳಿ ಎ.ಎ.ಐ. ಹೊಂದಿರುವ 30 ದಶಲಕ್ಷ ಡಾಲರ್ ಹಣವನ್ನು ಕೆನಡಾ ನ್ಯಾಯಾಲಯದ ಆದೇಶದಂತೆ ವಶಪಡಿಸಿಕೊಂಡಿರುವುದಾಗಿ ದೇವಸ್ ಮಲ್ಟಿಮೀಡಿಯಾ ವಕ್ತಾರರು ಹೇಳಿದ್ದರು.

ದೇವಸ್ ಮಲ್ಟಿಮೀಡಿಯಾ ಕಂಪನಿ ಜೊತೆ ಮಾಡಿಕೊಂಡಿದ್ದ ಒಪ್ಪಂದವನ್ನು ಇಸ್ರೋ 2011ರಲ್ಲಿ ಅಂತ್ಯಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ದೇವಸ್ ಮಲ್ಟಿಮೀಡಿಯಾಗೆ 1.2 ಶತಕೋಟಿ ಡಾಲರ್ ಪರಿಹಾರ ನೀಡುವಂತೆ ಅಮೆರಿಕ ನ್ಯಾಯಾಲಯ ಅಕ್ಟೋಬರ್ 27, 2020ರಲ್ಲಿ ಆದೇಶಿಸಿತ್ತು. ಈ ಪ್ರಕರಣದ ಹಿನ್ನೆಲೆಯಲ್ಲಿ ದೇವಸ್ ಮಲ್ಟಿಮೀಡಿಯಾ ಷೇರುದಾರರು ಕೆನಡಾ ನ್ಯಾಯಾಲಯದ ಮೊರೆ ಹೋಗಿದ್ದರು.

ಎ.ಎ.ಐ. ಭಾರತ ಸರ್ಕಾರದ ಭಾಗವಾಗಿದೆ. ಹೀಗಾಗಿ ಅದರ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಕೆನಡಾ ನ್ಯಾಯಾಲಯ ಆದೇಶಿಸಿದೆ ಎಂದು ದೇವಸ್ ಮಲ್ಟಿಮೀಡಿಯಾ ವಕ್ತಾರರು ಹೇಳಿದ್ದಾರೆ.


|| ಓಂ ಶ್ರೀ ಸಾಯಿರಾಂ || || ಶ್ರೀ ಸೋಮೇಶ್ವರ ಪ್ರಸನ್ನ ||

**ವೈಕುಂಠ ಸಮಾರಾಧನೆಯ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ವಾಸಿ
ಶ್ರೀ ವಿಷ್ಣು ನಾರಾಯಣ ಕುರ್ಡೇಕರ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 22.12.2021ನೇ ಬುಧವಾರ
ಬೆಳಿಗ್ಗೆ 8.30 ಕ್ಕೆ ನನ್ನ ಮಗನಾದ
**ಶ್ರೀ ಶ್ರೀಕಾಂತ ವಿಷ್ಣು ಕುರ್ಡೇಕರ್**
ಇವರು ದೈವಾಧೀನರಾದ ಪ್ರಯುಕ್ತ ಮೃತರ
ಆತ್ಮಶಾಂತಿಗಾಗಿ ತತ್ಸಂಬಂಧ
**ವೈಕುಂಠ ಸಮಾರಾಧನೆಯನ್ನು**
ದಿನಾಂಕ 05.01.2022ನೇ ಬುಧವಾರ ಮಧ್ಯಾಹ್ನ 12 ಗಂಟೆಗೆ
"ದೈವಜ್ಞ ಕಲ್ಯಾಣ ಮಂಟಪ " ಪಿ.ಬಿ. ರಸ್ತೆ, ದಾವಣಗೆರೆ. ಇಲ್ಲಿ ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ
ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಶ್ರೀಮತಿ ಮುಕ್ತಬಾಯಿ ಶ್ರೀ ವಿಷ್ಣು ನಾರಾಯಣ ಕುರ್ಡೇಕರ್,
ಶ್ರೀಮತಿ ಗೀತಾಬಾಯಿ, ಮಕ್ಕಳು, ಅಳಿಯ, ಮೊಮ್ಮಕ್ಕಳು,
ಕುರ್ಡೇಕರ್ ಕುಟುಂಬದವರು ಹಾಗೂ ಬಂಧು-ಮಿತ್ರರು




|| ಶ್ರೀ ವೆಂಕಟೇಶ್ವರ ಪ್ರಸನ್ನ||





ಶ್ರೀಮದ್ ವೃಷಭಪುರಿ ಸೂರ್ಯ ಸಿಂಹಾಸನಾಧೀಶ್ವರ 1108 ಜಗದ್ಗುರು
ಶ್ರೀ ಶ್ರೀ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬೃಹನ್ಮಠ-ನಂದಿಗುಡಿ.
ಶ್ರೀ ಶ್ರೀ ಶ್ರೀ ನಂದೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬಾಡದಬೈಲು, ಇವರುಗಳ ದಿವ್ಯ ಸಾನ್ನಿಧ್ಯದಲ್ಲಿ

**ಹಳ್ಳಿಹಾಳ್ ಗ್ರಾಮದ ಹೆಚ್. ಮಹದೇವಪ್ಪಗೌಡ್ರು**
**ಇವರ ಪ್ರಥಮ ವರ್ಷದ ಪುಣ್ಯಸ್ಮರಣೆ**



ಹೆಚ್. ಮಹದೇವಪ್ಪಗೌಡ್ರು ಹಳ್ಳಿಹಾಳ್.
ಮಾಜಿ ಅಧ್ಯಕ್ಷರು, ಶ್ರೀ ನಂದಿ ಪತ್ತಿನ ಸಹಕಾರ ಸಂಘ ನಿ.,
ಮಲೇಬೆನ್ನೂರು. ಹರಿಹರ ತಾ||

ಆತ್ಮೀಯರೇ.... ನಮ್ಮ ಪೂಜ್ಯ ತಂದೆಯವರಾದ
**ಊರಮುಂದ್ಲರ ಶ್ರೀ ಹೆಚ್. ಮಹದೇವಪ್ಪಗೌಡ್ರು**
ಇವರು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು... ಇವರ ಪ್ರಥಮ ವರ್ಷದ
ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ : 05.01.2022ನೇ ಬುಧವಾರ ಬೆಳಿಗ್ಗೆ
10.30ಕ್ಕೆ ಹಳ್ಳಿಹಾಳ್ ಗ್ರಾಮದಲ್ಲಿರುವ ನಮ್ಮ ಸ್ವಗೃಹದಲ್ಲಿ ಹಮ್ಮಿಕೊಂಡಿರುತ್ತೇವೆ.
ತಾವುಗಳು ಆಗಮಿಸಿ ನಮ್ಮ ತಂದೆಯವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ಬಯಸುವ...

ಮಕ್ಕಳಾದ : ಶ್ರೀಮತಿ ಸಾವಿತ್ರಮ್ಮ ಕೋಂ. ದಿ|| ಶ್ರೀ ಹೆಚ್.ಎಂ. ಚಂದ್ರಗೌಡ ಮತ್ತು ಮಕ್ಕಳು
ಶ್ರೀಮತಿ ಅಕ್ಕಮ್ಮ ಶ್ರೀ ಹೆಚ್.ಎಂ. ನಾಗರಾಜಪ್ಪ ಮತ್ತು ಮಕ್ಕಳು
ಶ್ರೀಮತಿ ಅಶ್ವಿನಿ ಶ್ರೀ ಹೆಚ್.ಎಂ. ಬಸವನಗೌಡ ಮತ್ತು ಮಕ್ಕಳು
ಶ್ರೀಮತಿ ಪ್ರಮೀಳಮ್ಮ ಶ್ರೀ ಎನ್. ಶೇಖರಪ್ಪ ಮತ್ತು ಮಕ್ಕಳು
ಊರಮುಂದ್ಲರ ವಂಶಸ್ಥರು, ಹಳ್ಳಿಹಾಳ್ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte